## ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ: 13-03-2026ರ ಶುಕ್ರವಾರ ಪೂರ್ವಾಹ್ನ 11.00 ಗಂಟೆಗೆ ನಡೆದ "ಸಿಂಡಿಕೇಟಿನ ಮೊದಲನೇ ಸಾಮಾನ್ಯ ಸಭೆ"ಯ ನಡಾವಳಿ**

**ಉಪಸ್ಥಿತರು:**

1. ಪ್ರೊ. ಎನ್.ಕೆ.ಲೋಕನಾಥ್, ಕುಲಪತಿಗಳು – ಅಧ್ಯಕ್ಷರು
2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಪರವಾಗಿ ಶ್ರೀಮತಿ ಡಿ.ಎಸ್.ಪ್ರತಿಮಾ, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು. – ಸದಸ್ಯರು
3. ಡಾ. ಟಿ.ಆರ್. ಚಂದ್ರಶೇಖರ್ – ಸದಸ್ಯರು
4. ಶ್ರೀ ಕೆ. ಗೋಕುಲ್ ಗೋವರ್ಧನ್ – ಸದಸ್ಯರು
5. ಡಾ. ಹೆಚ್.ಎಂ. ಮಹೇಶ – ಸದಸ್ಯರು
6. ಡಾ. ಎಂ. ಪ್ರಭು – ಸದಸ್ಯರು
7. ಡಾ. ಪ್ರಿಯ ಮ್ಯಾಥ್ಯೂ – ಸದಸ್ಯರು
8. ಡಾ. ಕೆಂಪೇಗೌಡ ಬಿ.ಕೆ. – ಸದಸ್ಯರು
9. ಶ್ರೀ ಮಹದೇಶು – ಸದಸ್ಯರು
10. ಶ್ರೀ ನಾಗರಾಜು ಸಿ. – ಸದಸ್ಯರು
11. ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫ – ಸದಸ್ಯರು
12. ಡಾ. ಶಿಲ್ಪ ಜೆ. – ಸದಸ್ಯರು
13. ಡಾ. ನಟರಾಜು ಹೆಚ್.ಎಸ್. – ಸದಸ್ಯರು
14. ಶ್ರೀ ಎಂ. ಶಂಕರ – ಸದಸ್ಯರು
15. ಡಾ. ಎನ್. ನಾಗರಾಜ, ಕುಲಸಚಿವರು (ಪರೀಕ್ಷಾಂಗ) – ಸದಸ್ಯರು
16. ಪ್ರೊ. ಎಸ್.ಜೆ. ಮಂಜುನಾಥ್, ಹಣಕಾಸು ಅಧಿಕಾರಿಗಳು (ಪ್ರಭಾರ) – ವಿಶೇಷ ಆಹ್ವಾನಿತರು
17. ಶ್ರೀಮತಿ ಸವಿತಾ ಎಂ.ಕೆ., ಕೆ.ಎ.ಎಸ್, ಕುಲಸಚಿವರು – ಸದಸ್ಯ ಕಾರ್ಯದರ್ಶಿ

**ಅನುಪಸ್ಥಿತರು**

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ಪರವಾಗಿ ಜಂಟಿ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಪ್ರಾಂತೀಯ ಕಛೇರಿ, ಮೈಸೂರು
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಮೊದಲಿಗೆ ಕುಲಸಚಿವರು ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಹಾಗೂ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ಹೊಸದಾಗಿ ಪ್ರಭಾರ ಹಣಕಾಸು ಅಧಿಕಾರಿಯಾಗಿ ನೇಮಕಗೊಂಡಿರುವ ಪ್ರೊ. ಎಸ್.ಜೆ. ಮಂಜುನಾಥ್‌ರವರನ್ನು ಸಿಂಡಿಕೇಟ್ ಸಭೆಗೆ ಸ್ವಾಗತಿಸಲಾಯಿತು.

ನಂತರ ಹಣಕಾಸು ಅಧಿಕಾರಿಗಳಾಗಿ ಸೇವೆ ಸಲ್ಲಿಸಿ ನಿರ್ಗಮಿಸಿರುವ ಶ್ರೀಮತಿ ರೇಖಾ ಕೆ.ಎಸ್, ಕೆ.ಎಸ್.ಎ.ಎಸ್, ಹಾಗೂ ಹಿರಿಯ ಡೀನರಾಗಿ ಸಿಂಡಿಕೇಟ್‌ನ ಸದಸ್ಯರಾಗಿ ಸೇವೆ ಸಲ್ಲಿಸಿದ ಸ್ಕೂಲ್ ಆಫ್ ಇಂಜಿನಿಯರಿಂಗ್‌ನ ಪ್ರೊ. ಎಸ್.ಜೆ. ಮಂಜುನಾಥ್‌ರವರುಗಳ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

ಮಾನ್ಯ ಕುಲಪತಿಗಳು ಮಾತನಾಡಿ, 2026–27ನೇ ಸಾಲಿಗೆ ಕರ್ನಾಟಕ ಸರ್ಕಾರದ ಆಯವ್ಯಯದಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ನೂರು ಕೋಟಿ ಅನುದಾನ ನೀಡಿರುತ್ತದೆ. ವಿಶ್ವವಿದ್ಯಾನಿಲಯವು ನೂರ ಎಪ್ಪತ್ತು ಕೋಟಿ ನೀಡುವಂತೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಸರ್ಕಾರವು ನೀಡಿರುವ ಅನುದಾನದಿಂದ ಪ್ರಸ್ತುತ ಮೈಸೂರು ವಿಶ್ವವಿದ್ಯಾನಿಲಯದ ಪಿಂಚಣಿದಾರರಿಗೆ ಪಿಂಚಣಿ ನೀಡಲು ಸಹಾಯಕವಾಗಿದೆ. ವಿಶ್ವವಿದ್ಯಾನಿಲಯದ ಮನವಿಯನ್ನು ಪರಿಗಣಿಸಿ ಅನುದಾನವನ್ನು ನೀಡಿರುವುದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಸಿಂಡಿಕೇಟ್ ಸಭೆಯ ಪರವಾಗಿ ವಂದನೆಗಳನ್ನು ಸಲ್ಲಿಸಿದರು. ಮುಂದಿನ ಡಿಸೆಂಬರ್‌ನಲ್ಲಿ ಮತ್ತಷ್ಟು ಬೇಡಿಕೆ ಸಲ್ಲಿಸಬಹುದಾಗಿದೆ ಎಂದು ಸಭೆಯ ಗಮನಕ್ಕೆ ತಂದರು. ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕರಿಸಿರುವ ಮೈಸೂರು ವಿಶ್ವವಿದ್ಯಾನಿಲಯದ ಎಲ್ಲಾ ಅಧಿಕಾರಿ ವರ್ಗದವರಿಗೆ ವಂದನೆಗಳನ್ನು ತಿಳಿಸಿದರು.

ಶ್ರೀಮತಿ ಸವಿತಾ ಎಂ.ಕೆ, ಕೆ.ಎ.ಎಸ್, ಕುಲಸಚಿವರು ಇವರು ಹಿರಿಯ ಶ್ರೇಣಿಯಿಂದ ಆಯ್ಕೆ ಶ್ರೇಣಿಗೆ ಪದೋನ್ನತಿ ಹೊಂದಿರುವುದಕ್ಕೆ ಸಿಂಡಿಕೇಟ್ ಸದಸ್ಯರು ಅಭಿನಂದಿಸಿದರು. ಕುಲಸಚಿವರು ಎಲ್ಲರಿಗು ಶುಭ ಕೋರಿದ್ದಕ್ಕೆ ಧನ್ಯವಾದವನ್ನು ತಿಳಿಸಿದರು.

ಕುಲಪತಿಯವರ ಅಪ್ಪಣೆಯ ಮೇರೆಗೆ ಕಾರ್ಯಸೂಚಿಯಂತೆ ವಿಷಯವನ್ನು ಕುಲಸಚಿವರು ಸಭೆಯಲ್ಲಿ ಮಂಡಿಸಿದರು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| I | **ದಿನಾಂಕ 26–11–2026ರಂದು ನಡೆದ ಸಿಂಡಿಕೇಟಿನ 7ನೇ ಸಾಮಾನ್ಯ ಸಭೆಯ ನಡಾವಳಿಯನ್ನು ದೃಢೀಕರಿಸುವ ಬಗ್ಗೆ.** |
| | ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಕಳೆದ ಮೂರು ಸಭೆಯ ದಿನಾಂಕ 26–11–2025ರಲ್ಲಿ ನಡೆದ 6ನೇ, ದಿನಾಂಕ 19–12–2025ರಂದು ನಡೆದ 7ನೇ ಸಾಮಾನ್ಯ ಸಭೆಗಳ ಮತ್ತು ದಿನಾಂಕ 05–02–2026ರಂದು ನಡೆದ ವಿಶೇಷ ಸಭೆಯಲ್ಲಿ ತೆಗೆದುಕೊಂಡ ಕ್ರಮಗಳ ವರದಿ (Action Taken Report (ATR)) ಬಗ್ಗೆ ಮಾಹಿತಿಯನ್ನು ನಮಗೆ ಮುಂಚಿತವಾಗಿ ನೀಡದಿರುವುದನ್ನು ಸಭೆಯ ಗಮನಕ್ಕೆ ತರುತ್ತಾ, ಈ ಮೂರು ಸಭೆಯಲ್ಲಿ ತೆಗೆದುಕೊಂಡ ಕ್ರಮಗಳ ಬಗ್ಗೆ ಸಾಕಷ್ಟು ಚರ್ಚಿಸಬೇಕಾಗಿದೆ ಎಂದು ಸಭೆಯ ಗಮನಕ್ಕೆ ತಂದರು.<br><br>ಮುಂದುವರೆದು, ಹಿಂದೆ ನಡೆದಂತಹ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದಿದ್ದರೆ ಏನು ಪ್ರಯೋಜನ? ಹಾಗೂ ಸಿಂಡಿಕೇಟ್ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳಿಗೆ ಕೈಗೊಂಡಂತಹ ಕ್ರಮಗಳ ಬಗೆಗಿನ ವರದಿಯಲ್ಲಿ ಕೆಲವೊಂದು ವಿಷಯಗಳನ್ನು ಕಾರ್ಯಗತಗೊಳಿಸದಿರುವುದು ಕಂಡು ಬಂದಿರುತ್ತದೆ ಎಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ, ಸಿಂಡಿಕೇಟ್ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳಿಗೆ ಕೈಗೊಂಡಂತಹ ಕ್ರಮಗಳ ಬಗ್ಗೆ ವರದಿಯಲ್ಲಿ ತಿಳಿಸಲಾಗಿದ್ದು, ಜೊತೆಗೆ ಕಳೆದ ಮೂರು ಸಭೆಯ ತೀರ್ಮಾನಗಳನ್ನು ಕಾರ್ಯರೂಪಕ್ಕೆ ತರಲಾಗಿದೆ ಎಂದು ಸಭೆಗೆ ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ಸಿಂಡಿಕೇಟ್ ಸಭೆಯ ನಡಾವಳಿಯನ್ನು ಮೈಸೂರು ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಅಪ್‌ಲೋಡ್ ಮಾಡಲಾಗಿದೆ. ಆದರೆ ಇದುವರೆವಿಗೆ ತಿದ್ದುಪಡಿಯಾಗಿರುವ ನಡಾವಳಿಗಳನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿಲ್ಲದಿರುವುದು ಕಂಡು ಬಂದಿದ್ದು, ತಕ್ಷಣವೇ ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಅಪ್‌ಲೋಡ್ ಮಾಡಲು ತಿಳಿಸುತ್ತಾ, ಇತ್ತೀಚಿನ ದಿನಗಳಲ್ಲಿ ಸಿಂಡಿಕೇಟ್‌ನ |

ಕಾರ್ಯಸೂಚಿಗಳು ಸರಿಯಾದ ಸಮಯಕ್ಕೆ ಸದಸ್ಯರಿಗೆ ಲಭ್ಯವಾಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕುಲಸಚಿವರು ಮಾತನಾಡಿ, ನಿಗಧಿತ ಅವಧಿಯೊಳಗೆ ಕಾರ್ಯಸೂಚಿಗಳನ್ನು ಎಲ್ಲಾ ಸದಸ್ಯರುಗಳಿಗೆ ತಲುಪಿಸುವ ನಿಟ್ಟಿನಲ್ಲಿ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಮಾನಸಗಂಗೋತ್ರಿಯ ಆವರಣದಲ್ಲಿರುವ ಕ್ರಿಕೇಟ್ ಸ್ಟೇಡಿಯಂ ಮುಂಭಾಗದಲ್ಲಿರುವ ಜಾಗದಲ್ಲಿ ಬೇರೊಬ್ಬರು ಅತಿಕ್ರಮವಾಗಿ ಉಪಯೋಗಿಸಿಕೊಳ್ಳುತ್ತಿರುವುದು ಕಂಡುಬಂದಿದೆ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಮಾನಸಗಂಗೋತ್ರಿಯ ಆವರಣದಲ್ಲಿರುವ ಕ್ರಿಕೇಟ್ ಸ್ಟೇಡಿಯಂನ ಮುಂಭಾಗದಲ್ಲಿರುವ ಸ್ಥಳವನ್ನು ಬೇರೊಬ್ಬರು ಉಪಯೋಗಿಸಿಕೊಳ್ಳುತ್ತಿರುವುದು ಕಂಡುಬಂದಿರುವ ಹಿನ್ನೆಲೆಯಲ್ಲಿ ಈ ಬಗ್ಗೆ ಈಗಾಗಲೇ ಅಗತ್ಯಕ್ರಮ ತೆಗೆದುಕೊಳ್ಳಲು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಪತ್ರವನ್ನು ಬರೆಯಲಾಗಿದ್ದು, ಸದರಿ ಸ್ಥಳದ ಕುರಿತು ಪ್ರಸ್ತುತ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಜಿಲ್ಲಾಧಿಕಾರಿಗಳೇ ಆಗಿರುವುದರಿಂದ ಅವರ ಗಮನಕ್ಕೂ ತರಲಾಗುವುದು ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಸದರಿ ವಿಷಯದ ಬಗ್ಗೆ ಮೈಸೂರು ಜಿಲ್ಲೆಯ ಜಿಲ್ಲಾಧಿಕಾರಿಯವರಿಗೆ ಪತ್ರ ಬರೆದು ಸಮಸ್ಯೆಯನ್ನು ಆದಷ್ಟು ಬೇಗ ಇತ್ಯರ್ಥಪಡಿಸುವಂತೆಯೂ ಹಾಗೂ ಸರ್ಕಾರದ ಗಮನಕ್ಕೂ ತರುವುದಾಗಿ ತಿಳಿಸಿದರು.

ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳಿಗೆ ಕಾವೇರಿ ನೀರಿನ ಸಂಪರ್ಕ ನೀಡುವ ಪೈಪ್‌ಲೈನ್ ವಿಷಯವಾಗಿ ಏನು ಕ್ರಮ ಕೈಗೊಂಡಿರುವಿರೀ ಎಂದು ಕೇಳಿದರು.

ಕುಲಸಚಿವರು ಮಾತನಾಡಿ, ಸದರಿ ವಿಷಯದ ಕುರಿತಾಗಿ ಆಯುಕ್ತರೊಂದಿಗೆ ಚರ್ಚಿಸಲಾಗಿದೆ, ಸದರಿಯವರು ತಿಳಿಸಿರುವ ಪ್ರಕಾರ ಮೊದಲು J-NERMನಿಂದ ಅನುದಾನ ಲಭ್ಯವಾಗುತ್ತಿದ್ದ ಕಾರಣ ಕಾವೇರಿ ನೀರು ತರುವ ನಿಟ್ಟಿನಲ್ಲಿ ಪೈಪ್‌ಲೈನ್ ಅಳವಡಿಸಲಾಗುತ್ತಿತ್ತು. ಪ್ರಸ್ತುತ ಪಾಲಿಕೆಯಿಂದ ಇಷ್ಟು ದೊಡ್ಡ ಮೊತ್ತದ ಕಾವೇರಿ ನೀರಿನ ಪೈಪ್‌ಲೈನ್ ಕಾರ್ಯ ಕೈಗೊಳ್ಳುವುದು ಸಾಧ್ಯವಾಗುವುದಿಲ್ಲವೆಂದು ತಿಳಿಸಿದ್ದು, ಜೊತೆಗೆ ಸದರಿ ವಿಷಯದ ಬಗ್ಗೆ ಸರ್ಕಾರವೇ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ತಿಳಿಸಿರುತ್ತಾರೆ ಎಂದು ತಿಳಿಸಿದರು.

ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಸಿಎಸ್‌ಆರ್ ಫಂಡ್‌ನಿಂದ ಸದರಿ ಕೆಲಸವನ್ನು ಮಾಡಲಿಕ್ಕೆ ಕ್ರಮ ಕೈಗೊಳ್ಳಬಹುದಲ್ಲವೆ ಎಂದು ತಿಳಿಸಿದರು

ಕುಲಸಚಿವರು ಮಾತನಾಡಿ, ಸದರಿ ವಿಷಯದ ಕುರಿತು ಸಾಕಷ್ಟು ಪ್ರಯತ್ನ ಮಾಡಲಾಗಿದೆ ಎಂದು ತಿಳಿಸಿದರು.

ಡಾ. ಶಿಲ್ಪ ಜೆ.ರವರು ಮಾತನಾಡಿ, ವಿದ್ಯಾರ್ಥಿನಿಲಯಗಳಲ್ಲಿ ಕಾವೇರಿ ನೀರು ಹಾಗೂ ಬೋರ್‌ವೇಲ್ ನೀರು ಮಿಶ್ರಣವಾಗುತ್ತಿದೆ. ಇದನ್ನು ಪ್ರತ್ಯೇಕಗೊಳಿಸಿ ವಿದ್ಯಾರ್ಥಿಗಳಿಗೆ ಕುಡಿಯುವ ನೀರಿಗೆ ಅವಕಾಶ ಮಾಡಿಕೊಡಬೇಕೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಕುಡಿಯುವ ನೀರಿನ ಕುರಿತು ಚರ್ಚಿಸಿ ಸರ್ಕಾರಕ್ಕೆ ವರದಿ ಸಲ್ಲಿಸುವುದಾಗಿ ತಿಳಿಸಿದರು.

ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿ ಟೆಲಿಫೋನ್ ಟವರ್ ಅಳವಡಿಸಲು ಅಧಿಸೂಚನೆಯನ್ನು ಹೊರಡಿಸುವುದು ಸೂಕ್ತವೆಂದರು.

ಕುಲಸಚಿವರು ಮಾತನಾಡಿ, ಟವರ್ ಅಳವಡಿಸುವ ಸಂಬಂಧ ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ವಿಭಾಗದಿಂದ ಕೆಲಸವಾಗಬೇಕಾಗಿದೆ, ಆದರೆ ಇಂಜಿನಿಯರಿಂಗ್ ವಿಭಾಗದಲ್ಲಿ ಯಾವುದೇ ಕ್ರಮಕೈಗೊಳ್ಳದ ಕಾರಣ ಆಡಳಿತ ಶಾಖೆಯಿಂದಲೇ ಟವರ್‌ಗೆ ಸಂಬಂಧಿಸಿದಂತೆ expression of interest ನೀಡುವಂತವರಿಗೆ ಅಧಿಸೂಚನೆ ಹೊರಡಿಸಲಾಗುವುದು ಎಂದು ತಿಳಿಸುತ್ತಾ, ಯುವರಾಜ ಕಾಲೇಜಿನ ಪ್ರಾಂಶುಪಾಲರು ರೂ. 90,020/–ರೂಪಾಯಿಗಳ ಚೆಕ್ ಬಳಸಿಕೊಂಡಿರುವ ಕುರಿತು ಮಾಹಿತಿಯನ್ನು ಸಹ ಪಡೆದುಕೊಂಡಿದ್ದೇವೆ. ಸದರಿಯವರ ವಿರುದ್ಧ ನಿಯಮಾನುಸಾರ ಕ್ರಮಕೈಗೊಳ್ಳಲಾಗುತ್ತದೆ ಎಂದು ತಿಳಿಸಿದರು.

ಶ್ರೀ ನಾಗರಾಜು ಸಿ.ರವರು ಮಾತನಾಡಿ, ಯುವರಾಜ ಕಾಲೇಜಿನ ಪ್ರಾಂಶುಪಾಲರು ನಿಯಮಬಾಹಿರವಾಗಿ ಹಣವನ್ನು ಉಪಯೋಗಿಸಿಕೊಂಡಿರುವುದರಿಂದ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, 90,020/–ರೂಪಾಯಿಗಳ ಚೆಕ್ ಬಳಸಿಕೊಂಡಿರುವ ಕುರಿತು ನಿಯಮಾನುಸಾರ ಯುವರಾಜ ಕಾಲೇಜಿನ ಪ್ರಾಂಶುಪಾಲರ ವಿರುದ್ಧ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು. ಸಿಂಡಿಕೇಟ್ ಸದಸ್ಯರು ತಿಳಿಸಿರುವ ಹಾಗೆ ಯುವರಾಜ ಕಾಲೇಜಿನ 2021–22, 2022–23ರ ಲೆಕ್ಕಪರಿಶೋಧನಾ ಕಾರ್ಯ ಕೈಗೊಳ್ಳಲಾಗಿದೆ. ಲೆಕ್ಕಪರಿಶೋಧಕರು ವಸೂಲಾತಿಗೆ ಬರೆದಿದ್ದು, ವಿಶ್ವವಿದ್ಯಾನಿಲಯ ನಿಯಮಾನುಸಾರ ಕ್ರಮ ಕೈಗೊಳ್ಳುತ್ತದೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ಯುವರಾಜ ಕಾಲೇಜಿನ ಸ್ವಾಯತ್ತತೆಗೆ ಸಂಬಂಧಿಸಿದಂತೆ ಅಂದು ಜರುಗಿದ ಸಭೆಯಲ್ಲಿ ಕೇವಲ ವಿಶ್ವವಿದ್ಯಾನಿಲಯದ ಸಂಯೋಜನೆಗೊಳಪಟ್ಟ ಕಾಲೇಜುಗಳ ಸಂಯೋಜನೆಗೆ ಸಂಬಂಧಪಟ್ಟ ಮಾತ್ರ ವಿಷಯವನ್ನು ಕಾರ್ಯಸೂಚಿಯಲ್ಲಿ ಮಂಡಿಸಿ, ಟೇಬಲ್ ಅಜೆಂಡಾದಲ್ಲಿ ಯುವರಾಜ ಕಾಲೇಜಿನ ಸ್ವಾಯತ್ತತೆಯನ್ನು ಹಿಂಪಡೆಯುವ ವಿಷಯವನ್ನು ಮಂಡಿಸಿ, ಅನುಮೋದನೆಯನ್ನು ಪಡೆದುಕೊಂಡಿದ್ದು, ಸದರಿ ಅನುಮೋದಿತ ತೀರ್ಮಾನಕ್ಕೆ ತಮ್ಮ ಅಸಮ್ಮತಿಯಿದೆಯೆಂದು ತಿಳಿಸುತ್ತಾ, ಅಸಮ್ಮತಿ ಪತ್ರವನ್ನು ನೀಡಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಸದರಿ ವಿಷಯದ ಬಗ್ಗೆಯಾಗಲಿ ಅಥವಾ ಇನ್ನ್ಯಾವುದೇ ವಿಷಯದ ಬಗ್ಗೆ ತಮ್ಮ ಆಕ್ಷೇಪಣೆಯಿದ್ದಲ್ಲಿ ಅಂದಿನ ಸಭೆಯಲ್ಲಿಯೇ ತಾವು ತಮ್ಮ ಅಸಮ್ಮತಿಯನ್ನು ಸೂಚಿಸಿ, ಪತ್ರವನ್ನು ನೀಡಬೇಕಾಗುತ್ತದೆ. ಜೊತೆಗೆ ಯುವರಾಜ ಕಾಲೇಜಿನಲ್ಲಿ ಆಡಳಿತಾತ್ಮಕ ಸಮಸ್ಯೆ, ಹಣ ದುರುಪಯೋಗ, ಬೋಧಕ/ಬೋಧಕೇತರರ ಕರ್ತವ್ಯ ನಿರ್ಲಕ್ಷತೆಗಳು ಹತ್ತು ಹಲವು ಸಮಸ್ಯೆಗಳಿರುವುದರಿಂದ ಸ್ವಾಯತ್ತತೆಯಿಂದ ಘಟಕ ಕಾಲೇಜನ್ನಾಗಿ ಪರಿವರ್ತಿಸಲಾಗಿದೆಯೆಂದು ಸಭೆಯ ಗಮನಕ್ಕೆ ತಂದರು.

ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಕಳೆದ ಮೂರು ಸಭೆಯಲ್ಲಿ ತೆಗೆದುಕೊಂಡ ಕ್ರಮಗಳ ವರದಿಗಳ (Action Taken Report) ಸಂಬಂಧ ಸಾಕಷ್ಟು ವಿಷಯಗಳನ್ನು ಚರ್ಚಿಸಬೇಕಾಗಿದೆ. ಈ ಸಂಬಂಧ ಮಾತನಾಡುವ ವಿಷಯವನ್ನು ತೆಗೆದುಕೊಂಡ ಕ್ರಮಗಳ ವರದಿಯಲ್ಲಿ ಗುರುತು ಮಾಡಿ ಸಭೆಗೆ ತಂದಿರುತ್ತೇವೆ ಇದರ ಬಗ್ಗೆ

| | |
|---|---|
| | ತಾವು ಕೂಡ ಪರಿಶೀಲಿಸಿ, ಮುಂದಿನ ಸಭೆಯಲ್ಲಿ ಈ ವಿಷಯದ ಕುರಿತು ಚರ್ಚಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಈಗಾಗಲೇ ಕಳೆದ ವರ್ಷದಲ್ಲಿ ಜರುಗಿರುವ ಹಲವಾರು ವಿಷಯಗಳ ತೀರ್ಮಾನಗಳ ಬಗ್ಗೆ ತೆಗೆದುಕೊಂಡಿರುವ ಕ್ರಮದ ಕುರಿತು ಯಾವುದಾದರೂ ಮಾಹಿತಿ ಬೇಕಾದ್ದಲ್ಲಿ ಪಟ್ಟಿ ಮಾಡಿ ನೀಡಿದ್ದಲ್ಲಿ ಈ ಬಗ್ಗೆ ಅಗತ್ಯ ಕ್ರಮವಹಿಸುವುದಾಗಿ ತಿಳಿಸಿದರು. |
| **ತೀರ್ಮಾನ** | **ದಿನಾಂಕ: 26–11–2025ರಂದು ಜರುಗಿದ "ಸಿಂಡಿಕೇಟಿನ ಏಳನೇ ಸಾಮಾನ್ಯ ಸಭೆ"ಯ ಹಾಗೂ ದಿನಾಂಕ: 19.12.2025ರಂದು ಜರುಗಿದ "ಸಿಂಡಿಕೇಟಿನ ಎಂಟನೇ ಸಾಮಾನ್ಯ ಸಭೆ"ಯ ನಡವಳಿಯನ್ನು ದೃಢೀಕರಿಸಲಾಯಿತು.**<br><br>**ದಿನಾಂಕ : 5.02.2026ರಂದು ಜರುಗಿದ "ವಿಶೇಷ ಸಿಂಡಿಕೇಟ್ ಸಭೆ"ಯ ನಡಾವಳಿಯನ್ನು ದೃಢೀಕರಿಸಲಾಯಿತು. (ಡಾ. ಟಿ.ಆರ್. ಚಂದ್ರಶೇಖರ್ ಅವರು ವಿಷಯ ಸಂಖ್ಯೆ 2.3ರ ವಿಷಯದ ತೀರ್ಮಾನಕ್ಕೆ ತಮ್ಮ ಅಸಮ್ಮತಿಯನ್ನು ಸೂಚಿಸಿ ಪತ್ರವನ್ನು ನೀಡಿದರು.)** |
| **ಸಾಮಾನ್ಯ ಸಭೆ 2026/1.1** | ಡಾ. ಹೆಚ್.ಎಸ್. ಕುಮಾರ ಇವರನ್ನು ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್, ಮಾನಸಗಂಗೋತ್ರಿ, ಮೈಸೂರು ಇಲ್ಲಿಗೆ ನಿರ್ದೇಶಕರಾಗಿ ನೇಮಕ ಮಾಡಿರುವ ಬಗ್ಗೆ. |
| **ತೀರ್ಮಾನ** | **ಡಾ. ಹೆಚ್.ಎಸ್. ಕುಮಾರ ಇವರನ್ನು ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್, ಮಾನಸಗಂಗೋತ್ರಿ, ಮೈಸೂರು ಇಲ್ಲಿಗೆ ನಿರ್ದೇಶಕರಾಗಿ ನೇಮಕ ಮಾಡಿರುವ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| **ಸಾಮಾನ್ಯ ಸಭೆ 2026/1.2** | ದಿವಂಗತ ಶ್ರೀಮತಿ ಹೇಮಲತ ಎಸ್., ದ್ವಿತೀಯ ದರ್ಜೆ ಸಹಾಯಕರು, ಆಡಳಿತ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಮಗಳಾದ ಕು. ಮೇಘನಾ ಎಲ್. ಅವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| **ತೀರ್ಮಾನ** | **ವಿಶ್ವವಿದ್ಯಾನಿಲಯದ ಸೇವೆಯಲ್ಲಿದ್ದಾಗಲೇ ನಿಧನರಾದ ನೌಕರರ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು ರಚಿಸಲಾಗಿರುವ ಅಧಿನಿಯಮಗಳನ್ವಯ ಕು. ಮೇಘನಾ ಎಲ್. ಇವರಿಗೆ ಅನುಕಂಪದ ಆಧಾರದ ಮೇಲೆ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ನೇಮಕಾತಿ ಮಾಡುವ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| **ಸಾಮಾನ್ಯ ಸಭೆ 2026/1.3** | ದಿವಂಗತ ಶ್ರೀ ಹರ್ಷ ವೈ.ಎಸ್., ಸಹಾಯಕ ಹಣಕಾಸು ಅಧಿಕಾರಿ, ಹಣಕಾಸು ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಮಗನಾದ ಶ್ರೀ ಕಿಶನ್ ಗೌಡ ಹೆಚ್. ಅವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| **ತೀರ್ಮಾನ** | **ಸರ್ಕಾರದಿಂದ ಬರಬೇಕಾಗಿರುವಂತಹ ನಿರ್ದೇಶನಗಳನ್ನು ಕಾಯ್ದಿರಿಸಿ ಮುಂದೂಡಲಾಯಿತು.** |
| **ಸಾಮಾನ್ಯ ಸಭೆ 2026/1.4** | ದಿವಂಗತ ಶ್ರೀ ಡಿ. ಅನಿಲ್ ಕುಮಾರ್, ಸಹಾಯಕ ಕುಲಸಚಿವರು (ಪ), ಪರೀಕ್ಷಾ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಮಗನಾದ ಶ್ರೀ ದೇವಕಿ ನಂದನ್ ಎ. ಅವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| **ತೀರ್ಮಾನ** | **ವಿಶ್ವವಿದ್ಯಾನಿಲಯದ ಸೇವೆಯಲ್ಲಿದ್ದಾಗಲೇ ನಿಧನರಾದ ನೌಕರರ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು ರಚಿಸಲಾಗಿರುವ ಅಧಿನಿಯಮಗಳನ್ವಯ ಶ್ರೀ ದೇವಕಿ ನಂದನ್ ಎ. ಇವರಿಗೆ ಅನುಕಂಪದ ಆಧಾರದ ಮೇಲೆ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ನೇಮಕಾತಿ ಮಾಡುವ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |

| | |
|---|---|
| **ಸಾಮಾನ್ಯ ಸಭೆ 2026/1.5** | ವಿಶ್ವವಿದ್ಯಾನಿಲಯದ ಶಾಸನಬದ್ಧ ಅಧಿಕಾರಿಗಳು ವಿದೇಶಗಳಿಗೆ ಪ್ರವಾಸ ಕೈಗೊಳ್ಳುವ ಮುನ್ನ ಕಡ್ಡಾಯವಾಗಿ ನೇಮಕಾತಿ ಪ್ರಾಧಿಕಾರದ ಅನುಮತಿಯನ್ನು ಪಡೆದ ನಂತರ ತೆರಳುವ ಬಗ್ಗೆ. |
| | **ಕುಲಸಚಿವರು ಮಾತನಾಡಿ,** ವಿಶ್ವವಿದ್ಯಾನಿಲಯದ ಅನುಮತಿ ಪಡೆಯದೇ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಿವಿಧ ವೃಂದದ ಶಾಸನಬದ್ಧ ಅಧಿಕಾರಿಗಳು/ ವಿಭಾಗದ ಮುಖ್ಯಸ್ಥರುಗಳು / ಇನ್ನಿತರ ವಿಭಾಗಗಳ ಎಲ್ಲಾ ಬಟವಾಡೆ ಅಧಿಕಾರಿಗಳು ಕಡ್ಡಾಯವಾಗಿ ವಿಶ್ವವಿದ್ಯಾನಿಲಯದ ಅನುಮತಿ ಪಡೆಯದೇ, ಅವರುಗಳ ವೈಯಕ್ತಿಕ ಕಾರಣಗಳಿಗಾಗಿ ವಿದೇಶ ಪ್ರವಾಸಕ್ಕೆ ತೆರಳಿ, ಸ್ವದೇಶಕ್ಕೆ ವಾಪಸ್ಸಾದ ನಂತರ ನೇಮಕಾತಿ ಪ್ರಾಧಿಕಾರದ ಅನುಮತಿ ಪಡೆಯಲು ವಿಶ್ವವಿದ್ಯಾನಿಲಯಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುತ್ತಿದ್ದಾರೆಂದು ಸಭೆಯ ಗಮನಕ್ಕೆ ತಂದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಕನಿಷ್ಠ ಒಂದು ತಿಂಗಳ ಅವಧಿಗೂ ಮುನ್ನ ಕಡ್ಡಾಯವಾಗಿ ವಿಶ್ವವಿದ್ಯಾನಿಲಯದ ಅನುಮತಿಯನ್ನು ಪಡೆಯಬೇಕೆಂದು ತಿಳಿಸಿದರು.<br><br>ಕುಲಸಚಿವರು (ಪರೀಕ್ಷಾಂಗ) ಇವರು ಮಾತನಾಡಿ, ಒಬ್ಬರು ಪ್ರಾಧ್ಯಾಪಕರು ವಿದೇಶಕ್ಕೆ ತೆರಳಿದ್ದು 20 ವರ್ಷಗಳಾದರೂ ಸಹ ಅವರು ವಾಪಸ್ಸು ವಿಶ್ವವಿದ್ಯಾನಿಲಯದ ಕರ್ತವ್ಯಕ್ಕೆ ಬಂದಿರುವುದಿಲ್ಲ ಹಾಗೂ ಅವರು ವೇತನವನ್ನು ಪಡೆದಿರುವುದಿಲ್ಲವೆಂದು ಸಭೆಯ ಗಮನಕ್ಕೆ ತಂದರು.<br><br>ಕುಲಸಚಿವರು ಮಾತನಾಡಿ, ಇಂತಹ ಸಂದರ್ಭಗಳಲ್ಲಿ ಸಿಂಡಿಕೇಟಿನ ಘಟನೋತ್ತರ ಅನುಮತಿ ಪಡೆಯಲು ತಿಳಿಸಿದರು.<br><br>ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ವಿದೇಶಕ್ಕೆ ತೆರಳಿರುವ ಅಧ್ಯಾಪಕರ ಕಡತವನ್ನು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಬೇಕೆಂದು ತಿಳಿಸಿದರು. |
| **ತೀರ್ಮಾನ** | **ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಿವಿಧ ವೃಂದದ ಶಾಸನಬದ್ಧ ಅಧಿಕಾರಿಗಳು/ ವಿಭಾಗದ ಮುಖ್ಯಸ್ಥರುಗಳು/ ಇನ್ನಿತರ ವಿಭಾಗಗಳ ಎಲ್ಲಾ ಬಟವಾಡೆ ಅಧಿಕಾರಿಗಳು ವಿದೇಶಗಳಿಗೆ ಪ್ರವಾಸ ಕೈಗೊಳ್ಳುವ ಒಂದು ತಿಂಗಳು ಮುಂಚಿತವಾಗಿ ಕಡ್ಡಾಯವಾಗಿ ವಿಶ್ವವಿದ್ಯಾನಿಲಯದ ಅನುಮತಿಯನ್ನು ಪಡೆಯುವಂತೆ ಹಾಗೂ ತುರ್ತು ಸಂದರ್ಭದಲ್ಲಿ ಸೂಕ್ತ ಕಾರಣವನ್ನು ನೀಡಿ ಮಾನ್ಯ ಕುಲಪತಿಗಳ ಅನುಮೋದನೆ ಪಡೆದು ವಿದೇಶಕ್ಕೆ ತೆರಳಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |
| **ಸಾಮಾನ್ಯ ಸಭೆ 2026/1.6** | ಇಂಗ್ಲಿಷ್ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸ್ಥಾಪಿಸಲಾಗಿರುವ ಡಾ. ಯು.ಆರ್. ಅನಂತಮೂರ್ತಿ ಅಧ್ಯಯನ ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಆಹ್ವಾನಿಸುವ ಬಗೆಗೆ. |
| **ತೀರ್ಮಾನ** | **ಇಂಗ್ಲಿಷ್ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸ್ಥಾಪಿಸಲಾಗಿರುವ ಡಾ. ಯು.ಆರ್. ಅನಂತಮೂರ್ತಿ ಅಧ್ಯಯನ ಪೀಠಕ್ಕೆ ನಿವೃತ್ತ ಪ್ರಾಧ್ಯಾಪಕರಾಗಿರುವ ಪ್ರೊ. ಮಂಜುನಾಥ ಜಿ. ಹೆಗ್ಡೆ ಇವರನ್ನು ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು.** |
| **ಸಾಮಾನ್ಯ ಸಭೆ 2026/1.7** | ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡಿರುವ ಬಗ್ಗೆ. (ಅನುಸಮರ್ಥನೆ) |
| **ತೀರ್ಮಾನ** | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಪ್ರೊ. ನಿಂಗಮ್ಮ ಸಿ ಬೆಟ್ಸೂರ್, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು, ದಿನಾಂಕ: 02-03-2026 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಿರುವುದನ್ನು ಸಿಂಡಿಕೇಟ್ ಸಭೆ ಅನುಸಮರ್ಥಿಸಿತು.** |

| | |
|---|---|
| **ಸಾಮಾನ್ಯ ಸಭೆ 2026/1.8** | ಸಸ್ಯಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡಿರುವ ಬಗ್ಗೆ. (ಅನುಸಮರ್ಥನೆ) |
| **ತೀರ್ಮಾನ** | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಪ್ರೊ. ಎಂ.ಎಸ್. ನಳಿನಿ, ಪ್ರಾಧ್ಯಾಪಕರು, ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 18-03-2026ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ಸಸ್ಯಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಿರುವುದನ್ನು ಸಿಂಡಿಕೇಟ್ ಅನುಸಮರ್ಥಿಸಿತು.** |
| **ಸಾಮಾನ್ಯ ಸಭೆ 2026/1.9** | ದಿನಾಂಕ : 01-04-2006ಕ್ಕಿಂತ ಮೊದಲೇ ವಿವಿಧ ವಿಶ್ವವಿದ್ಯಾನಿಲಯ ಮತ್ತು ಕಾಲೇಜು ಶಿಕ್ಷಣ ಇಲಾಖೆಯ ಅಧೀನಕ್ಕೊಳಪಟ್ಟ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸಿರುವ ಅಧ್ಯಾಪಕರುಗಳಿಗೆ ಹಳೆ ಪಿಂಚಣಿ ಸೌಲಭ್ಯವನ್ನು ವಿಸ್ತರಿಸಿರುವ ಆದೇಶವನ್ನು ಹಿಂಪಡೆಯುವ ಬಗ್ಗೆ. |
| | ಕುಲಸಚಿವರು ಮಾತನಾಡಿ, 10 ಪ್ರಾಧ್ಯಾಪಕರು ಇತರೆ ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸುತ್ತಿರುತ್ತಾರೆ ನಂತರ 2007ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕೆಲವು ಅಧ್ಯಾಪಕರು ಪ್ರಾಧ್ಯಾಪಕರಾಗಿ ನೇಮಕರಾಗಿರುತ್ತಾರೆ. ಆಯ್ಕೆಯಾದ ಪ್ರಾಧ್ಯಾಪಕರನ್ನು ವಿಶ್ವವಿದ್ಯಾನಿಲಯ ಎನ್‌ಪಿಎಸ್ ಯೋಜನೆಯಡಿಯಲ್ಲಿ ಪಿಂಚಣಿಗೆ ಒಳಪಡಿಸಲಾಗಿರುತ್ತದೆ. ತದನಂತರ ವಿಶ್ವವಿದ್ಯಾನಿಲಯದಲ್ಲಿ ಆಯ್ಕೆಯಾಗಿರುವ ಪ್ರಾಧ್ಯಾಪಕರು ದಿನಾಂಕ: 26-06-2014ರಲ್ಲಿ ನಡೆದ ಸಿಂಡಿಕೇಟ್ ಸಭೆಯಲ್ಲಿ ಇವರ ಇತರೆ ವಿಶ್ವವಿದ್ಯಾನಿಲಯದ ಸೇವೆಯನ್ನು ಪರಿಗಣಿಸಿ ಎನ್‌ಪಿಎಸ್‌ನಿಂದ ಓಪಿಎಸ್‌ಗೆ ಮಾರ್ಪಾಡಿಸಿಕೊಂಡಿರುತ್ತಾರೆ.<br><br>ವಿಶ್ವವಿದ್ಯಾನಿಲಯದಲ್ಲಿ ಆಯ್ಕೆಯಾಗಿರುವ ಪ್ರಾಧ್ಯಾಪಕರಲ್ಲಿ ಪ್ರೊ. ವಾಸುದೇವ್ ಎಂಬುವವರು ನಿವೃತ್ತಿಯಾಗಿದ್ದು, ಪಿಂಚಣಿಗೆ ಸಂಬಂಧಿಸಿದಂತೆ ಹಣಕಾಸು ಇಲಾಖೆಗೆ ಮಾಹಿತಿಯನ್ನು ಸಲ್ಲಿಸಿದಾಗ, ಹಣಕಾಸು ಇಲಾಖೆಯು ಸ್ಪಷ್ಟವಾಗಿ ಸದರಿಯವರಿಗೆ ಓಪಿಎಸ್‌ನಲ್ಲಿ ಪಿಂಚಣಿ ನೀಡಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ವಿಶ್ವವಿದ್ಯಾನಿಲಯವು ಸರ್ಕಾರಕ್ಕೆ ಪತ್ರ ಬರೆದಿರುತ್ತದೆ. ಸರ್ಕಾರವು ಸಹ ಎನ್‌ಪಿಎಸ್ ಯೋಜನೆಯಲ್ಲಿ ಪಿಂಚಣಿ ನೀಡುವುದಕ್ಕೆ ತಿಳಿಸಿರುತ್ತದೆ. ಆದ್ದರಿಂದ ವಿಶ್ವವಿದ್ಯಾನಿಲಯವು ಓಪಿಎಸ್ ಯೋಜನೆಯಡಿಯಲ್ಲಿದ್ದ ಪ್ರಾಧ್ಯಾಪಕರನ್ನು ಎನ್‌ಪಿಎಸ್ ಯೋಜನೆಯಡಿಯಲ್ಲಿ ಪಿಂಚಣಿ ನೀಡುವಂತೆ ಆದೇಶಿಸಿ, ಹಿಂಬರಹವನ್ನು ಸಹ ನೀಡಲಾಗಿದೆ ಎಂದು ತಿಳಿಸಿದರು.<br><br>10 ಮಂದಿ ಪ್ರಾಧ್ಯಾಪಕರಲ್ಲಿ ಕೆಲವು ಮಂದಿ ನಿವೃತ್ತಿ ಹೊಂದಿರುವ ಪ್ರಾಧ್ಯಾಪಕರು ಸರ್ಕಾರಕ್ಕೆ ಮತ್ತು ಗೌರವಾನ್ವಿತ ರಾಜ್ಯಪಾಲರಿಗೆ ಪತ್ರ ಬರೆದು ಓಪಿಎಸ್ ಯೋಜನೆಯಲ್ಲಿ ಪಿಂಚಣಿ ನೀಡುವಂತೆ ಕೋರಿರುತ್ತಾರೆ. ಮೈಸೂರು ವಿಶ್ವವಿದ್ಯಾನಿಲಯವು ನಿವೃತ್ತಿ ಹೊಂದಿರುವ ಪ್ರಾಧ್ಯಾಪಕರುಗಳಿಗೆ ಹಿಂಬರಹ ನೀಡಲಾಗಿರುವ ಅಂಶವನ್ನು ಸಭೆಯ ಗಮನಕ್ಕೆ ತಂದರು.<br><br>ಶ್ರೀ ಮಹದೇಶುರವರು ಮಾತನಾಡಿ, ಈ ಮೇಲೆ ತಿಳಿಸಿರುವ ಅಧ್ಯಾಪಕರುಗಳಿಗೆ ಎನ್‌ಪಿಎಸ್ ವಂತಿಕೆಯನ್ನು ಸದರಿಯವರುಗಳ ವೇತನದಿಂದ ಕಟಾಯಿಸದಿರುವುದು ಕಂಡುಬಂದಿದೆಯೆಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಘನ ನ್ಯಾಯಾಲಯವು ಅಧ್ಯಾಪಕರುಗಳ ಸೇವಾನುಸಾರ ಎನ್‌ಪಿಎಸ್‌ಗೆ ಕೊಡಬೇಕಾದಷ್ಟು ಹಣವನ್ನು ಬ್ಯಾಂಕ್‌ಗೆ ಸಲ್ಲಿಸಿ ಬ್ಯಾಂಕ್‌ನಿಂದ ಬರುವ ಬಡ್ಡಿಯನ್ನು ನಿವೃತ್ತ ಅಧ್ಯಾಪಕರುಗಳಿಗೆ ನೀಡುವಂತೆ ತಿಳಿಸಿರುತ್ತಾರೆ ಎಂದು ಸಭೆಯ ಗಮನಕ್ಕೆ ತಂದರು. |

ಶ್ರೀ ಕೆ. ಗೋಕುಲ್ ಗೋವರ್ಧನ್ ರವರು ಮಾತನಾಡಿ, ದಿನಾಂಕ: 15.04.2014ರಂದು ನಡೆದ ಸಿಂಡಿಕೇಟ್ ಸಭೆಯು ಈ ರೀತಿ ನಿರ್ಣಯ ತೆಗೆದುಕೊಳ್ಳುವುದಕ್ಕೆ ಕಾರಣವೇನು ಎಂದು ಕೇಳಿದರು.

ಕುಲಸಚಿವರು ಮಾತನಾಡಿ, ಕರ್ನಾಟಕ ಸರ್ಕಾರ ದಿನಾಂಕ 01–04–2006ರ ಒಳಗಡೆ ನೇಮಕಾತಿಗೆ ಅಧಿಸೂಚನೆ ಹೊರಡಿಸಿರುವ ಅಧ್ಯಾಪಕರುಗಳಿಗೆ ಮಾತ್ರ ಓಪಿಎಸ್ ಪಿಂಚಣಿ ಯೋಜನೆ ಅನ್ವಯಿಸುವುದಾಗಿ ತಿಳಿಸಿರುತ್ತದೆ. ಆದರೆ ಸ್ವಾಯತ್ತತೆ, ಸಂಯೋಜಿತ ಕಾಲೇಜುಗಳು ಒಳಗೊಂಡಿರುವ ವಿಶ್ವವಿದ್ಯಾನಿಲಯಕ್ಕೆ ಓಪಿಎಸ್ ಪಿಂಚಣಿ ಯೋಜನೆ ಅನ್ವಯಿಸುವುದಾಗಿ ಆದೇಶ ನೀಡಿರುವುದಿಲ್ಲ. ವಿಶ್ವವಿದ್ಯಾನಿಲಯವು 2007ರಲ್ಲಿ ಹೊಸ ನೇಮಕಾತಿ ಅಧಿಸೂಚನೆ ಹೊರಡಿಸಿರುವುದರಿಂದ ಅಂದಿನ ಸಾಲಿನಲ್ಲಿ ಎನ್‌ಪಿಎಸ್ ಪಿಂಚಣಿ ಯೋಜನೆ ಜಾರಿಯಲಿದ್ದ ಕಾರಣ ನೇಮಕಗೊಂಡಿರುವ ಅಧ್ಯಾಪಕರುಗಳಿಗೆ ಎನ್‌ಪಿಎಸ್ ಪಿಂಚಣಿ ಯೋಜನೆಯಡಿಯಲ್ಲಿ ನೀಡಲಾಗಿದೆ ಎಂದು ತಿಳಿಸಿದರು. 2007ನೇ ವರ್ಷದಲ್ಲಿ ನೇಮಕಗೊಂಡಂತಹ ಅಧ್ಯಾಪಕರುಗಳು ಈ ಹಿಂದೆ ತಾವು ಬೇರೊಂದು ವಿಶ್ವವಿದ್ಯಾನಿಲಯ, ರಾಜ್ಯ ಸರ್ಕಾರದ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಯಂ ಅಧ್ಯಾಪಕರಾಗಿ ಸೇವೆ ಸಲ್ಲಿಸಿ, ಓಪಿಎಸ್ ಪಿಂಚಣಿ ಯೋಜನೆಗೆ ಒಳಪಟ್ಟಂತಹ ನೌಕರರಾಗಿರುವುದರಿಂದ ಮೈಸೂರು ವಿಶ್ವವಿದ್ಯಾನಿಲಯದ ಸೇವೆಗೆ ಸೇರ್ಪಡೆಗೊಳ್ಳುವ ಮುನ್ನ ಬೇರೊಂದು ವಿಶ್ವವಿದ್ಯಾನಿಲಯ ಹಾಗೂ ರಾಜ್ಯ ಸರ್ಕಾರದ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ ಓಪಿಎಸ್ ಪಿಂಚಣಿಗೆ ಬದಲಾಯಿಸಿಕೊಡುವಂತೆ ಸಲ್ಲಿಸಿರುವ ಮನವಿಯನ್ನು ಅಂದಿನ ಸಿಂಡಿಕೇಟ್ ಸಭೆಯು ಪುರಸ್ಕರಿಸಿ ಸದರಿ ಅಧ್ಯಾಪಕರುಗಳಿಗೆ ಒಪಿಎಸ್‌ಅನ್ನು ಜಾರಿಗೊಳಿಸಲಾಗಿದೆ ಎಂದು ತಿಳಿಸಿದರು. ದಿನಾಂಕ: 15.04.2014ರ ಸಿಂಡಿಕೇಟ್ ಸಭೆಯ ನಿರ್ಣಯದನ್ವಯ ವಿಶ್ವವಿದ್ಯಾನಿಲಯದ 10 ಜನ ಅಧ್ಯಾಪಕರುಗಳಿಗೆ ಎನ್‌ಪಿಎಸ್ ನಿಂದ ಓಪಿಎಸ್ ಪಿಂಚಣಿಗೆ ಮಾರ್ಪಡಿಸಿರುವುದಕ್ಕೆ ನಿಯಮಾನುಸಾರ ಅವಕಾಶವಿರುವುದಿಲ್ಲವೆಂದು ರಾಜ್ಯ ಸರ್ಕಾರವು ತನ್ನ ಪತ್ರದಲ್ಲಿ ತಿಳಿಸಿರುವ ಅಂಶವನ್ನು ಸಭೆಯ ಗಮನಕ್ಕೆ ತರುತ್ತಾ, ಈ ಹಿನ್ನೆಲೆಯಲ್ಲಿ ಎನ್‌ಪಿಎಸ್ ನಿಂದ ಓಪಿಎಸ್ ಪಿಂಚಣಿಗೆ ಮಾರ್ಪಡಿಸಿರುವ ಕ್ರಮವನ್ನು ಹಿಂಪಡೆದು ಮತ್ತೆ ಎನ್‌ಪಿಎಸ್ ಪಿಂಚಣಿಗೆ ಬದಲಾಯಿಸಲು ಕ್ರಮವಹಿಸಲಾಗಿದೆ.

ಶ್ರೀ ಕೆ. ಗೋಕುಲ್ ಗೋವರ್ಧನ್ ಇವರು ಮಾತನಾಡಿ, ವಿಶ್ವವಿದ್ಯಾನಿಲಯವು ಪ್ರಾಧ್ಯಾಪಕರುಗಳಿಗೆ ಓಪಿಎಸ್ ಮತ್ತು ಎನ್‌ಪಿಎಸ್ ಎಂದು ಗೊಂದಲದಲ್ಲಿ ತನ್ನ ನಿರ್ಣಯ ಬದಲಾಯಿಸಿದರೆ ಪ್ರಾಧ್ಯಾಪಕರುಗಳ ಜೀವನದಲ್ಲಿ ಆಗುವ ವ್ಯತ್ಯಾಸಗಳಿಗೆ ಯಾರು ಹೊಣೆಯಾಗುತ್ತಾರೆ ಎಂದು ಕೇಳಿದರು.

ಮಾನ್ಯ ಕುಲಪತಿಗಳು ಮಾತನಾಡಿ, ವಿಶ್ವವಿದ್ಯಾನಿಲಯವು ಹೊಸದಾಗಿ ಅಧಿಸೂಚನೆ ಹೊರಡಿಸಿರುವ ಹಿನ್ನಲೆಯಲ್ಲಿ ಹೊಸ ನೇಮಕಾತಿಯಾಗಿರುತ್ತದೆ ಎಂದು ಸರ್ಕಾರವು ಸ್ಪಷ್ಟವಾಗಿ ತಿಳಿಸಿರುತ್ತದೆ ಹಾಗೂ ಸರ್ಕಾರವು ಕಾಲಕಾಲಕ್ಕೆ ಅಧಿನಿಯಮಗಳಲ್ಲಿ ವ್ಯತ್ಯಾಸ ತರುವುದರಿಂದ ನಾವು ಅಳವಡಿಸಿಕೊಳ್ಳಬೇಕಾಗುತ್ತದೆ ಎಂದು ತಿಳಿಸಿದರು.

ಶ್ರೀ ಕೆ. ಗೋಕುಲ್ ಗೋವರ್ಧನ್ ಇವರು ಮಾತನಾಡಿ, ನಿವೃತ್ತ ಪ್ರಾಧ್ಯಾಪಕರುಗಳ ಸೇವೆಯನ್ನು ಗಮನಿಸಬೇಕು ಹಾಗೂ ಅವರ ಪರವಾಗಿ ನ್ಯಾಯಾಲಯವು ತೀರ್ಪನ್ನು ನೀಡಿದರೆ ಅವರ ಪರ ನಿಲ್ಲುವ ಪ್ರಯತ್ನ ಮಾಡಬೇಕೆಂದು ತಿಳಿಸಿದರು.

ಕುಲಸಚಿವರು ಮಾತನಾಡಿ, 10 ಮಂದಿ ಪ್ರಾಧ್ಯಾಪಕರಲ್ಲಿ ಕೆಲವು ನಿವೃತ್ತ ಪ್ರಾಧ್ಯಾಪಕರು ಗೌರವಾನ್ವಿತ ರಾಜ್ಯಪಾಲರಿಗೆ ಓಪಿಎಸ್ ಪಿಂಚಣಿಯನ್ನು ಮಂಜೂರು ಮಾಡಿಸಿಕೊಡುವಂತೆ ಮನವಿ ಸಲ್ಲಿಸಿರುತ್ತಾರೆ. ಸದರಿ ಮನವಿಯನ್ನು ರಾಜ್ಯಪಾಲರು ಈ ಕಛೇರಿಗೆ ರವಾನಿಸಿ ಅಗತ್ಯ ಕ್ರಮವಹಿಸುವಂತೆ ತಿಳಿಸಿರುತ್ತಾರೆ. ಆದರೆ ಪಿಂಚಣಿ ಯೋಜನೆಯು ಸರ್ಕಾರದ

| | |
|---|---|
| | ಅಧೀನದಲ್ಲಿ ಬರುವುದರಿಂದ ಸರ್ಕಾರದ ನಿರ್ದೇಶನ ಪಾಲಿಸಬೇಕಾಗುತ್ತದೆ ಎಂದು ತಿಳಿಸಿದರು.<br><br>ಕುಲಸಚಿವ (ಪರೀಕ್ಷಾಂಗ)ರವರು ಮಾತನಾಡಿ, ಪ್ರೊ. ವಾಸುದೇವ್‌ರವರು ನಿವೃತ್ತಿ ಹೊಂದಿದ್ದು, ಅವರಿಗೆ ಓಪಿಎಸ್ ಪಿಂಚಣಿ ಸೌಲಭ್ಯವನ್ನು ನೀಡಲಾಗಿರುತ್ತದೆ. ಅದೇ ರೀತಿ ಇತರೆ ನಿವೃತ್ತ ಪ್ರಾಧ್ಯಾಪಕರುಗಳು ಸಹ ನಮಗೂ ಓಪಿಎಸ್ ಪಿಂಚಣಿ ಸೌಲಭ್ಯವನ್ನು ನೀಡುವಂತೆ ಕೋರಿರುತ್ತಾರೆ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಪ್ರೊ. ವಾಸುದೇವ್‌ರವರು ನೇಮಕಾತಿಯಾದಂತಹ ಸಂದರ್ಭದಲ್ಲಿ ಹೆಚ್‌ಆರ್‌ಎಂಎಸ್ ಪದ್ಧತಿ ಇರುವುದಿಲ್ಲವೆಂದು ತಿಳಿಸಿದರು.<br><br>ಡಾ. ನಟರಾಜು ಹೆಚ್.ಎಸ್. ರವರು ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿ ಖಾಯಂ ಅಧ್ಯಾಪಕರುಗಳ ಕೊರತೆ ಇದೆ. ಸರ್ಕಾರದ ನಿರ್ದೇಶನದಂತೆ ಖಾಯಂ ಅಧ್ಯಾಪಕರುಗಳ ನೇಮಕಾತಿಗೆ ಕ್ರಮಕೈಗೊಳ್ಳುವುದಕ್ಕೆ ತಿಳಿಸಿದರು.<br><br>ಕುಲಸಚಿವರು ಮಾತನಾಡಿ, ಒಳಮೀಸಲಾತಿ ಸಂಬಂಧ ಎಸ್‌ಸಿ ಜಾತಿಯ ಮೂರು ಗುಂಪು (ಎ.ಬಿ.ಸಿ)ಗಳಿಗೆ ಬಿಂದು ಗುರುತಿಸಿಕೊಡುವುದಕ್ಕೆ ಸರ್ಕಾರದಿಂದ ತಿಳಿಸಲಾಗಿತ್ತು. ವಿಶ್ವವಿದ್ಯಾನಿಲಯವು ಮೂರು ಗುಂಪುಗಳಿಗೆ ಬಿಂದು ಗುರುತಿಸಿ ಸಲ್ಲಿಸಲಾಗಿದೆಯೆಂದು ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ಖಾಯಂ ಅಧ್ಯಾಪಕರುಗಳ ನೇಮಕಾತಿಗೆ ಕ್ರಮಕೈಗೊಳ್ಳಲಾಗುತ್ತಿದೆ ಹಾಗೂ ಒಳ ಮೀಸಲಾತಿ ಸಂಬಂಧಿಸಿದ ಗೊಂದಲವಿದ್ದು, ಸದರಿ ಗೊಂದಲವು ನಿವಾರಣೆಯಾಗಿ, ರಾಜ್ಯ ಸರ್ಕಾರವು ವಿಶ್ವವಿದ್ಯಾನಿಲಯಕ್ಕೆ ಅಧ್ಯಾಪಕರುಗಳ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳುವಂತೆ ನಿರ್ದೇಶನ ನೀಡಿದ್ದಲ್ಲಿ ಅಗತ್ಯ ಕ್ರಮವಹಿಸಲಾಗುವುದು ಎಂದು ತಿಳಿಸಿದರು. |
| **ತೀರ್ಮಾನ** | **ದಿನಾಂಕ: 01-04-2006ಕ್ಕಿಂತ ಮೊದಲೇ ವಿವಿಧ ವಿಶ್ವವಿದ್ಯಾನಿಲಯ ಮತ್ತು ಕಾಲೇಜು ಶಿಕ್ಷಣ ಇಲಾಖೆಯ ಅಧೀನಕ್ಕೊಳಪಟ್ಟ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸಿರುವ ಅಧ್ಯಾಪಕರುಗಳಿಗೆ ಹಳೆ ಪಿಂಚಣಿ ಸೌಲಭ್ಯವನ್ನು ವಿಸ್ತರಿಸಿರುವ ಆದೇಶವನ್ನು ಹಿಂಪಡೆಯಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| **ಸಾಮಾನ್ಯ ಸಭೆ 2026/1.10** | ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಗೆ ನಿರ್ದೇಶಕರನ್ನು ಮತ್ತು ಇಂಗ್ಲಿಷ್ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| **ತೀರ್ಮಾನ** | **ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಡಾ. ಕೃಷ್ಣಕುಮಾರಿ ಮನವಳ್ಳಿ, ಪ್ರಾಧ್ಯಾಪಕರು, ಇಂಗ್ಲಿಷ್ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 05-04-2026ರಿಂದ ಜಾರಿಗೆ ಬಂದಂತೆ ಇಂಗ್ಲಿಷ್ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನಾಗಿ ಮತ್ತು ಪ್ರೊ. ಎಂ.ನಂಜಯ್ಯ, ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇವರನ್ನು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರನ್ನಾಗಿ ದಿನಾಂಕ: 27-05-2026ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ನೇಮಕ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |

| | |
|---|---|
| **ಸಾಮಾನ್ಯ ಸಭೆ 2026/1.11** | ಸರಸ್ವತಿಪುರಂನ ಸಾಹುಕಾರ್ ಚನ್ನಯ್ಯ ರಸ್ತೆಯಲ್ಲಿರುವ ದೀನದಯಾಳ್ ವಿದ್ಯಾರ್ಥಿನಿಲಯದ ಮುಂಭಾಗದಲ್ಲಿರುವ ವಿಶ್ವವಿದ್ಯಾನಿಲಯದ ಖಾಲಿ ನಿವೇಶನದಲ್ಲಿ ವಾಣಿಜ್ಯ ಸಂಕೀರ್ಣ ಕಟ್ಟಡವನ್ನು ನಿರ್ಮಾಣ ಮಾಡಲು ಮೈಸೂರು ನಿರ್ಮಿತಿ ಕೇಂದ್ರ, ಮೈಸೂರು ಇವರಿಂದ ನಿರ್ವಹಿಸಲು ಅನುಮತಿ ನೀಡಿರುವ ಬಗ್ಗೆ. (ಅನುಸಮರ್ಥನೆಗಾಗಿ) |
| | ಕುಲಸಚಿವರು ಮಾತನಾಡಿ, ಸರಸ್ವತಿಪುರಂನ ಸಾಹುಕಾರ್ ಚನ್ನಯ್ಯ ರಸ್ತೆಯಲ್ಲಿರುವ ದೀನದಯಾಳ್ ವಿದ್ಯಾರ್ಥಿನಿಲಯದ ಮುಂಭಾಗದಲ್ಲಿರುವ ವಿಶ್ವವಿದ್ಯಾನಿಲಯದ ಖಾಲಿ ನಿವೇಶನದಲ್ಲಿ ವಾಣಿಜ್ಯ ಸಂಕೀರ್ಣ ಕಟ್ಟಡವನ್ನು ನಿರ್ಮಾಣ ಮಾಡಲು ಮೈಸೂರು ನಿರ್ಮಿತಿ ಕೇಂದ್ರದವರಿಂದ ನಿರ್ಮಿಸಲು ಕ್ರಮಕೈಗೊಳ್ಳಲಾಗುವುದು. ಸದರಿ ಜಾಗದಲ್ಲಿ ಸಣ್ಣ ಸಣ್ಣ ಮಳಿಗೆಯ ಬದಲಾಗಿ ಬ್ಯಾಂಕ್‌ಗಳಿಗೆ, ದೊಡ್ಡ ಮಟ್ಟದ ಕೊಠಡಿಗಳನ್ನು ನಿರ್ಮಾಣ ಮಾಡುವುದು ಹಾಗೂ ಬಾಡಿಗೆ ಕರಾರು ಒಪ್ಪಂದಗಳನ್ನು ನಿಯಮಗಳನ್ವಯ ಕಟ್ಟುನಿಟ್ಟಾಗಿ ರೂಪಿಸುವುದುಸೂಕ್ತ ಎಂದು ತಿಳಿಸಿದರು.<br><br>ಶ್ರೀ ಕೆ. ಗೋಕುಲ್ ಗೋವರ್ಧನ್ ಇವರು ಮಾತನಾಡಿ,ಇತರರು ಜಾಗವನ್ನು ಕಬಳಿಸುವ ಅವಕಾಶವಿರುವುದರಿಂದ ಕಾಮಗಾರಿಯನ್ನು ತಕ್ಷಣವೇ ಪ್ರಾರಂಭಿಸುವುದು ಸೂಕ್ತವೆಂದು ತಿಳಿಸುತ್ತಾ,ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಮಾನ್ಯ ಜಿಲ್ಲಾಧಿಕಾರಿಯವರಿಗೆ ಪತ್ರ ಬರೆದು,ಸದರಿ ಜಾಗದಲ್ಲಿ ಸರ್ಕಾರಿ ಕಛೇರಿಗೆ ಕಟ್ಟಡ ಲಭ್ಯವಿರುವುದಾಗಿ ತಿಳಿಸುವುದು ಹಾಗೂ ಲೀಡ್‌ಬ್ಯಾಂಕ್‌ನ ವ್ಯವಸ್ಥಾಪಕರುಗಳನ್ನು ಭೇಟಿ ಮಾಡಿ ಬ್ಯಾಂಕ್‌ಗಳಿಗೆ ಜಾಗ ಲಭ್ಯವಿದೆ ತಮ್ಮ ಅವಶ್ಯಕತೆಗೆ ತಕ್ಕಂತೆ ವಿನ್ಯಾಸ ಮಾಡಿಕೊಡಲಾಗುವುದು ಎಂದು ತಿಳಿಸುವುದು ಸೂಕ್ತ ಎಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ, ಸದರಿ ವಿಷಯದ ಕುರಿತು ಸೂಕ್ತ ಕ್ರಮಕೈಗೊಳ್ಳುವುದಾಗಿ ತಿಳಿಸಿದರು. |
| **ತೀರ್ಮಾನ** | **ಸರಸ್ವತಿಪುರಂನ ಸಾಹುಕಾರ್ ಚನ್ನಯ್ಯ ರಸ್ತೆಯಲ್ಲಿರುವ ದೀನದಯಾಳ್ ವಿದ್ಯಾರ್ಥಿನಿಲಯದ ಮುಂಭಾಗದಲ್ಲಿರುವ ವಿಶ್ವವಿದ್ಯಾನಿಲಯದ ಖಾಲಿ ನಿವೇಶನದಲ್ಲಿ ವಾಣಿಜ್ಯ ಸಂಕೀರ್ಣ ಕಟ್ಟಡವನ್ನು ನಿರ್ಮಾಣ ಮಾಡಲು ಮೈಸೂರು ನಿರ್ಮಿತಿ ಕೇಂದ್ರ, ಮೈಸೂರು ಇವರಿಂದ ನಿರ್ವಹಿಸಲು ಅನುಮತಿ ನೀಡಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| **ಸಾಮಾನ್ಯ ಸಭೆ 2026/1.12** | ಮೈಸೂರು ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಪ್ಲಾನಿಂಗ್ ಹಾಗೂ ಆರ್ಕಿಟೆಕ್ಚರ್, ಇಂಜಿನಿಯರಿಂಗ್ ಕಾಲೇಜು, ಮಹಾರಾಜ ಕಾಲೇಜು ಮತ್ತು ಯುವರಾಜ ಕಾಲೇಜಿಗೆ ಸಂಬಂಧಿಸಿದ ಬಗ್ಗೆ. |
| | ಕುಲಸಚಿವರು ಮಾತನಾಡಿ. ಸಿಂಡಿಕೇಟ್ ಸಭೆಯ ಸದಸ್ಯರಾದ ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮೈಸೂರು ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಪ್ಲಾನಿಂಗ್ ಹಾಗೂ ಆರ್ಕಿಟೆಕ್ಚರ್, ಇಂಜಿನಿಯರಿಂಗ್ ಕಾಲೇಜು, ಮಹಾರಾಜ ಕಾಲೇಜು ಮತ್ತು ಯುವರಾಜ ಕಾಲೇಜಿಗೆ ಸಂಬಂಧಿಸಿದ ಮಾಹಿತಿಯನ್ನು ಕೋರಿದ್ದು, ಸದರಿಮಾಹಿತಿಗಳನ್ನು ಸದಸ್ಯರಿಗೆ ಸಲ್ಲಿಸಿದೆ ಎಂದು ಸಭೆಯ ಗಮನಕ್ಕೆ ತಂದರು.<br><br>ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿ ಮೂಲಭೂತ ಸೌಲಭ್ಯಗಳಿದ್ದಾಗ್ಯೂ ವಿದ್ಯಾರ್ಥಿಗಳ ಸಂಖ್ಯೆ ಯಾವ ಕಾರಣಕ್ಕೆ ಕ್ಷೀಣಿಸುತ್ತಿದೆ ಎಂಬುದರ ಬಗ್ಗೆ ಮಾಹಿತಿ ಪಡೆಯಲಾಗಿದೆ ಎಂದು ತಿಳಿಸುತ್ತಾ, ಮಹಾರಾಜ ಕಾಲೇಜಿನಲ್ಲಿ ಈಗಾಗಲೇ ಬಿಸಿಎ ಪ್ರೋಗ್ರಾಂಅನ್ನು ಪ್ರಾರಂಭಿಸಿದ್ದು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಹಾಜರಾತಿ ಕುರಿತು ದೂರುಗಳು ಬಂದಿರುತ್ತದೆ, ವಿಭಾಗಗಳಲ್ಲಿ ಕಛೇರಿ ಸಮಯದಲ್ಲಿ ಬೋಧಕ ಮತ್ತು ಬೋಧಕೇತರರು ಲಭ್ಯವಿಲ್ಲದಿದ್ದರೆ ಶಿಸ್ತು |

| | |
|---|---|
| | ಕ್ರಮಕೈಗೊಳ್ಳಲಾಗುತ್ತದೆ ಎಂದು ಸಿಂಡಿಕೇಟ್ ಸಭೆಯಲ್ಲಿ ಒಂದು ನಿರ್ಣಯ ತೆಗೆದುಕೊಳ್ಳುವಂತೆ ತಿಳಿಸಿದರು.<br><br>ಮಾನ್ಯ ಕುಲಪತಿಗಳು ಮಾತನಾಡಿ, ವಿಶ್ವವಿದ್ಯಾನಿಲಯದ ಹಲವು ವಿಭಾಗ/ಘಟಕ ಕಾಲೇಜುಗಳಿಗೆ ಭೇಟಿ ಮಾಡಿದ ಸಂದರ್ಭದಲ್ಲಿ ಬೋಧಕ ವರ್ಗದವರು ಲಭ್ಯವಿಲ್ಲದಿದ್ದರೆ/ಸಿಸಿಟಿವಿ ಪರಿಶೀಲಿಸಿ ಒಂದು ವಾರ್ಷಿಕ ವೇತನ ಬಡ್ತಿಯನ್ನು ಕಡಿತಗೊಳಿಸುವ ಕ್ರಮಕೈಗೊಳ್ಳಲಾಗುವುದು, ಮತ್ತಷ್ಟು ಸುಧಾರಣೆ ತರುವ ಪ್ರಯತ್ನ ಮಾಡಲಾಗುವುದು ಎಂದು ತಿಳಿಸುತ್ತಾ, ಸ್ಕೂಲ್ ಆಫ್ ಇಂಜಿನಿಯರಿಂಗ್ ಕಾಲೇಜಿನ ಅಧ್ಯಾಪಕರ ವಿರುದ್ಧ ಸಾಕಷ್ಟು ದೂರುಗಳು ಕೇಳಿಬರುತ್ತಿದೆ. ಕಾಲೇಜಿನಲ್ಲಿ ಲಭ್ಯವಿಲ್ಲದಿರುವುದು, ಧರಿಸುವ ಬಟ್ಟೆಗಳಲ್ಲಿ ಶಿಸ್ತು ಪಾಲಿಸದಿರುವುದು ಹೀಗೆಯೇ ಮುಂದುವರೆಸಿಕೊಂಡು ಹೋದಲ್ಲಿ, ಮುಂದಿನ ಶೈಕ್ಷಣಿಕ ಸಾಲಿಗೆ ಆದೇಶ ನೀಡುವುದಿಲ್ಲ ಎಂದು ಎಚ್ಚರಿಸಲಾಗಿದೆಯೆಂದು ತಿಳಿಸುತ್ತಾ, ಸ್ಕೂಲ್ ಆಫ್ ಪ್ಲಾನಿಂಗ್ ಹಾಗೂ ಆರ್ಕಿಟೆಕ್ಚರ್, ಇಂಜಿನಿಯರಿಂಗ್ ಕಾಲೇಜು, ಮಹಾರಾಜ ಕಾಲೇಜು ಮತ್ತು ಯುವರಾಜ ಕಾಲೇಜಿಗಳ ಶೈಕ್ಷಣಿಕ ವಿಷಯಗಳಿಗೆ ಸಂಬಂಧಿಸಿದಂತೆ ಒಂದು ಸಮಿತಿ ರಚಿಸಲಾಗುವುದೆಂದು ತಿಳಿಸಿದರು.<br><br>ಶ್ರೀ ಮಹದೇಶುರವರು ಮತ್ತು ಶ್ರೀ ಕೆ. ಗೋಕುಲ್ ಗೋವರ್ಧನ್ ರವರುಗಳು ಮಾತನಾಡಿ, ಸ್ಕೂಲ್ ಆಫ್ ಇಂಜಿನಿಯರಿಂಗ್‌ನಲ್ಲಿ ಪದವಿ ಪ್ರಧಾನ ದಿನವನ್ನು ನಡೆಸಲು ವಿದ್ಯಾರ್ಥಿಗಳಿಂದ ಹಣವನ್ನು ವಸೂಲಾತಿ ಮಾಡಲಾಗಿದೆ ಎಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಸ್ಕೂಲ್ ಆಫ್ ಇಂಜಿನಿಯರಿಂಗ್‌ನಲ್ಲಿ ಪದವಿ ಪ್ರಧಾನ ದಿನವನ್ನು ನಡೆಸಲು ವಿದ್ಯಾರ್ಥಿಗಳಿಂದ ಹಣವನ್ನು ವಸೂಲಾತಿ ಮಾಡಿರುವ ಹಣವನ್ನು ವಾಪಸ್ಸು ಮಾಡಿರುವುದಾಗಿ ತಿಳಿಸುತ್ತಾ, ಮುಂದಿನ ದಿನಗಳಲ್ಲಿ ವಿಶ್ವವಿದ್ಯಾನಿಲಯದ ವತಿಯಿಂದಲೇ ಪದವಿ ಪ್ರಧಾನ ದಿನವನ್ನು ಹಮ್ಮಿಕೊಳ್ಳಲಾಗುವುದೆಂದು ತಿಳಿಸಿದರು. |
| **ತೀರ್ಮಾನ** | **ಮೈಸೂರು ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಪ್ಲಾನಿಂಗ್ ಹಾಗೂ ಆರ್ಕಿಟೆಕ್ಚರ್, ಇಂಜಿನಿಯರಿಂಗ್ ಕಾಲೇಜು, ಮಹಾರಾಜ ಕಾಲೇಜು ಮತ್ತು ಯುವರಾಜ ಕಾಲೇಜಿಗೆ ಸಂಬಂಧಿಸಿದ ವಿಷಯವನ್ನು ಸಿಂಡಿಕೇಟ್‌ನಲ್ಲಿ ಗಮನಿಸಲಾಯಿತು.** |
| **ಸಾಮಾನ್ಯ ಸಭೆ 2026/1.13** | ಪರೀಕ್ಷಾ ಅಕ್ರಮ ಹಾಗೂ ಲೋಪದೋಷಗಳ ವಿಚಾರಣಾ ಸಮಿತಿಯ ಶಿಫಾರಸ್ಸುಗಳು. |
| | ಕುಲಸಚಿವ (ಪರೀಕ್ಷಾಂಗ)ರವರು ಮಾತನಾಡಿ, All India Institute of Speech and Hearing and Department of Commerce ವಿಷಯದಲ್ಲಿ ನವೆಂಬರ್/ಡಿಸೆಂಬರ್ 2025 ಹಾಗೂ ಜನವರಿ 2026ರಲ್ಲಿ ನಡೆದ ಸ್ನಾತಕ ಪದವಿ/ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಪರೀಕ್ಷಾ ಅಕ್ರಮದ ಆರೋಪಕ್ಕೆ ಒಳಗಾಗಿರುವ ಪ್ರಕರಣಗಳು ವಿಶ್ವವಿದ್ಯಾನಿಲಯಕ್ಕೆ ವರದಿಯಾಗಿದ್ದು, ಪ್ರಾಂಶುಪಾಲರಿಗೆ ಹಾಗೂ ಆರೋಪಕ್ಕೆ ಒಳಗಾದ ವಿದ್ಯಾರ್ಥಿಗಳಾದ Najla Amal Ambazhappally, Sejal Mahajan, Vidya H.S and Rakshitha H S ಇವರನ್ನು ದಿನಾಂಕ: 03-02-2026ರಂದು ನಡೆದ ಎಂ.ಪಿ.ಎಲ್.ಇ ಸಮಿತಿಯ ಮುಂದೆ ಹಾಜರಾಗುವಂತೆ ತಿಳಿಸಿದ್ದು, ವಿದ್ಯಾರ್ಥಿಗಳು ಸಮಿತಿ ಮುಂದೆ ತಮ್ಮ ತಪ್ಪುಗಳನ್ನು ಒಪ್ಪಿಕೊಂಡಿರುತ್ತಾರೆ. ಆದ್ದರಿಂದ ವಿಶ್ವವಿದ್ಯಾನಿಲಯವು ನಾಲ್ಕು ವಿದ್ಯಾರ್ಥಿಗಳಿಗೆ ದಂಡ ಹಾಗೂ ಶಿಕ್ಷೆಯನ್ನು ವಿಧಿಸಲಾಗಿದೆ ಎಂದು ಸಭೆಯ ಗಮನಕ್ಕೆ ತಂದರು. |

| | |
|---|---|
| | ಮಾನ್ಯ ಕುಲಪತಿಯವರು ಮಾತನಾಡಿ, ಪರೀಕ್ಷಾ ಅಕ್ರಮ ಹಾಗೂ ಲೋಪದೋಷಗಳನ್ನು ತಡೆಹಿಡಿಯುವ ಸಂಬಂಧ ವಿಶ್ವವಿದ್ಯಾನಿಲಯದ ಪರೀಕ್ಷಾ ಕೇಂದ್ರದಲ್ಲಿಯೇ ಪರೀಕ್ಷೆಯನ್ನು ನಡೆಸಲು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು. |
| **ತೀರ್ಮಾನ** | **ಪರೀಕ್ಷಾ ಅಕ್ರಮ ಹಾಗೂ ಲೋಪದೋಷಗಳ ವಿಚಾರಣಾ ಸಮಿತಿಯ ಶಿಫಾರಸ್ಸುಗಳನ್ನು ಸಿಂಡಿಕೇಟ್ ಅನುಮೋದಿಸಿತು.** |
| **ಸಾಮಾನ್ಯ ಸಭೆ 2026/1.14** | ಭೂ ವಿಜ್ಞಾನ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ ಮತ್ತು Central Ground Water Board (CGWB), Government of India, India ಸಂಸ್ಥೆಯೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆ ಸಂಬಂಧ ಅನುಸಮರ್ಥನೆ ಕೋರುವ ಬಗೆಗೆ. |
| | ಡಾ. ನಟರಾಜು ಹೆಚ್.ಎಸ್. ರವರು ಮಾತನಾಡಿ, ಬೇಸಿಗೆ ಕಾಲ ಪ್ರಾರಂಭವಾಗಿರುವುದರಿಂದ, ವಿದ್ಯಾರ್ಥಿಗಳಿಗೆ ಕುಡಿಯುವ ನೀರಿನ ಸೌಕರ್ಯವನ್ನು ಒದಗಿಸಲು ಕ್ರಮಕೈಗೊಳ್ಳುವಂತೆ ತಿಳಿಸಿದರು.<br><br>ಕುಲಸಚಿವರು ಮಾತನಾಡಿ, ಮಾನಸಗಂಗೋತ್ರಿಯಲ್ಲಿ ಕುಡಿಯುವ ನೀರಿಗೆ ಅಭಾವವಾಗುವ ಸಾಧ್ಯತೆಗಳಿದ್ದು, ಲೈಬ್ರರಿಯಲ್ಲಿರುವ ನೀರಿನ ಘಟಕವನ್ನು ರಿಪೇರಿ ಮಾಡಿಸುವುದಾಗಿ ತಿಳಿಸಿದರು. ನೀರಿನ ಘಟಕದ ಎಎಂಸಿಗೆ ಸಂಬಂಧಿಸಿದಂತೆ ಅಲ್ಪಾವಧಿಯ ಟೆಂಡರ್ ಆಹ್ವಾನಿಸಿ ಕ್ರಮಕೈಗೊಳ್ಳಲಾಗುತ್ತದೆ ಎಂದು ತಿಳಿಸಿದರು.<br><br>ಡಾ. ಹೆಚ್.ಎಂ. ಮಹೇಶರವರು ಮಾತನಾಡಿ, ಸೋಲಾರ್ ಪ್ಯಾನಲ್ ಅಳವಡಿಸುವ ಮುಖಾಂತರ ವಿದ್ಯುಚ್ಛಕ್ತಿಗೆ ಹೆಚ್ಚಿನ ಹಣ ವ್ಯಯಿಸುವುದು ತಪ್ಪುತ್ತದೆಯೆಂದು ಎಂದು ತಿಳಿಸಿದರು.<br><br>ಕುಲಸಚಿವರು ಮಾತನಾಡಿ, ವಿಶ್ವವಿದ್ಯಾನಿಲಯಕ್ಕೆ ಸೋಲಾರ್ ಪ್ಯಾನಲ್ ಅಳವಡಿಸಲು CESCOMರವರೊಂದಿಗೆ ಚರ್ಚಿಸುತ್ತಿದ್ದೇವೆ. ಸೋಲಾರ್ ಪ್ಯಾನಲ್ ಅಳವಡಿಸುವುದರಿಂದ ಸರ್ಕಾರದಿಂದ ಸಬ್ಸಿಡಿ ಕೂಡ ನೀಡಲಾಗುತ್ತದೆ ಎಂದು ತಿಳಿಸಿದರು. |
| **ತೀರ್ಮಾನ** | **ಭೂ ವಿಜ್ಞಾನ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ ಮತ್ತು Central Ground Water Board (CGWB), Government of India, India ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| **ಸಾಮಾನ್ಯ ಸಭೆ 2026/1.15** | Specialized Programme ಅಡಿಯಲ್ಲಿನ ಕೋರ್ಸ್‌ಗಳ ಅಧ್ಯಯನ ಮಂಡಳಿಗಳ ರಚನೆ/ಪುನರ್‌ರಚನೆ ಬಗೆಗೆ–ಅನುಸಮರ್ಥನೆಗಾಗಿ. |
| **ತೀರ್ಮಾನ** | **Acharya Institute for Innovation and Transformation ಎಂ.ಐ.ಟಿ. ಕ್ಯಾಂಪಸ್, ಬೆಳವಾಡಿ, ಶ್ರೀರಂಗಪಟ್ಟಣ ತಾ., ಮಂಡ್ಯ ಜಿಲ್ಲೆ ಸಂಸ್ಥೆಯು B.Des (Hons.) Vedic Architecutre, B.C.A. (Hons.) Artificial Intelligence & Machine Learning ಮತ್ತು B.C.A. (Hons.) Cyber Security & Data Science ಕೋರ್ಸ್‌ಗಳಿಗೆ Sera Jey Monastic Institute, ಬೈಲಕುಪ್ಪೆ – 571104 ಸಂಸ್ಥೆಯ B.A. (Hon's.) in Ancient Tibetan Language, B.A. (Hon's.) (Ancient Philosophy) ಮತ್ತು B.A. (Hon's.) (Ancient Psychology) ಕೋರ್ಸ್‌ಗಳ ಅಧ್ಯಯನ ಮಂಡಳಿಗಳನ್ನು ರಚನೆ/ಪುನರ್‌ರಚಿಸುವ ಸಂಬಂಧ ವಿಶ್ವವಿದ್ಯಾನಿಲಯವು ಹೊರಡಿಸಿರುವ ಅಧಿಸೂಚನೆಯನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |

| | |
|---|---|
| **ಸಾಮಾನ್ಯ ಸಭೆ 2026/1.16** | Specialized Programme ಅಡಿಯಲ್ಲಿನ ಕೋರ್ಸ್‌ಗಳ ಅಧ್ಯಯನ ಮಂಡಳಿಗಳ ರಚನೆ/ಪುನರ್‌ರಚನೆ ಬಗೆಗೆ–ಅನುಸಮರ್ಥನೆಗಾಗಿ. |
| **ತೀರ್ಮಾನ** | **Mysore Institute of Hotel Management & Culinary, ಹೀಮ ಕನ್ವೆನ್ಷನ್ ಸೆಂಟರ್ ರಸ್ತೆ, ಹೆಬ್ಬಾಳು ಇಂಡಸ್ಟ್ರೀಯಲ್ ಎಸ್ಟೇಟ್, ಮೈಸೂರು ಸಂಸ್ಥೆಯ 1) Diploma in Hospitality & Hotel Management (2) Diploma in Culinary Arts (3) Diploma in Bakery & Pastry ಕೋರ್ಸುಗಳಿಗೆ ಹೊಸ ಅಧ್ಯಯನ ಮಂಡಳಿಯನ್ನು ರಚಿಸಲು ಹಾಗೂ Axiom Institute of Education, Youth Efforts for Society Trust (YES), ಯಾದವಗಿರಿ, ಮೈಸೂರು ಸಂಸ್ಥೆಯ 1) Diploma in Fire & Personal Safety (2) Diploma in Hospital & Health Helathcare Management & (3) Diploma in Business Administration ಕೋರ್ಸ್‌ಗಳ ಅಧ್ಯಯನ ಮಂಡಳಿಗಳ ರಚನೆ/ಪುನರ್‌ರಚಿಸುವ ಸಂಬಂಧ ವಿಶ್ವವಿದ್ಯಾನಿಲಯವು ಹೊರಡಿಸಿರುವ ಅಧಿಸೂಚನೆಯನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| **ಸಾಮಾನ್ಯ ಸಭೆ 2026/1.17** | 2025–26ನೇ ಶೈಕ್ಷಣಿಕ ಸಾಲಿಗೆ ಪ್ರಥಮ ವರ್ಷದ ಎಂ.ಬಿ.ಎ. ಪ್ರೋಗ್ರಾಂಗೆ Sponsored ಕೋಟಾದಡಿಯಲ್ಲಿ ಪ್ರವೇಶಾತಿ ನೀಡಿರುವ ವಿಷಯದ ಸಂಬಂಧ ಸಿಂಡಿಕೇಟ್ ಸಭೆಯ ಅನುಸಮರ್ಥನೆಯನ್ನು ಕೋರುವ ಬಗ್ಗೆ. |
| **ತೀರ್ಮಾನ** | **2025–26ನೇ ಶೈಕ್ಷಣಿಕ ಸಾಲಿಗೆ ಬಿ.ಎನ್. ಬಹದ್ದೂರ್ ಫ್ಯಾಮಿಲಿ ಫೌಂಡೇಷನ್, ಯುಎಸ್‌ಎ, ಇವರು ತಿಳಿಸಿರುವ ಮೂವರು ವಿದ್ಯಾರ್ಥಿಗಳಿಗೆ Sponsored ಕೋಟಾದಡಿಯಲ್ಲಿ ಪ್ರಥಮ ವರ್ಷದ ಎಂ.ಬಿ.ಎ. ಪ್ರೋಗ್ರಾಂಗೆ ಪ್ರವೇಶಾತಿ ನೀಡಿರುವುದನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು.** |
| **ಸಾಮಾನ್ಯ ಸಭೆ 2026/1.18** | 2026–27ನೇ ಶೈಕ್ಷಣಿಕ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿನ ಮೂರು (3) ಕಾಲೇಜುಗಳ ಹೆಸರುಗಳನ್ನು ಬದಲಾವಣೆ ಮಾಡಲು ಅನುಮೋದನೆ ಕೋರಿರುವ ಬಗ್ಗೆ. |
| **ತೀರ್ಮಾನ** | **2026–27ನೇ ಶೈಕ್ಷಣಿಕ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿನ ಸಂಯೋಜಿತ ಮೂರು (3) ಕಾಲೇಜುಗಳ ಹೆಸರುಗಳನ್ನು ಕರ್ನಾಟಕ ರಾಜ್ಯಗಳ ವಿಶ್ವವಿದ್ಯಾನಿಲಯ ಕಾಯ್ದೆ 2000ರ ಪ್ರಕರಣ 59ರ ಅನ್ವಯ ಬದಲಾವಣೆ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| **ಸಾಮಾನ್ಯ ಸಭೆ 2026/1.19** | ರೂಸ 2.0 ಕಾರ್ಯಕ್ರಮದಡಿಯಲ್ಲಿ ಖರೀದಿಸಲಾಗುವ ವೈಜ್ಞಾನಿಕ ಉಪಕರಣಗಳ ನಿರ್ವಹಣೆಯ ಸಂಬಂಧ 15 ಅಭ್ಯರ್ಥಿಗಳನ್ನು ಶಿಷ್ಯವೇತನದಡಿಯಲ್ಲಿ ನೇಮಕ ಮಾಡುವ ಬಗ್ಗೆ. |
| | ಮಾನ್ಯ ಕುಲಪತಿಗಳು ಮಾತನಾಡಿ, ರೂಸ 2.0 ಕಾರ್ಯಕ್ರಮದಡಿಯಲ್ಲಿ ಖರೀದಿಸಲಾಗುವ ವೈಜ್ಞಾನಿಕ ಉಪಕರಣಗಳ ನಿರ್ವಹಣೆ, ಮೇಲುಸ್ತುವಾರಿ/ಜವಾಬ್ದಾರಿಗಳನ್ನು ನೋಡಿಕೊಳ್ಳುವ ಸಲುವಾಗಿ ಮತ್ತು ಸಂಶೋಧನೆ ನಡೆಸಲು ಯುಜಿಸಿ ನಿಯಮಾನುಸಾರ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದ 15 ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುವುದೆಂದು ತಿಳಿಸಿದರು. ರೂಸಾ ಯೋಜನೆಯಿಂದ ಶಿಷ್ಯವೇತನ ಬರದೆ ಹೋಗುವ ಸಂಭವವಿರುವುದರಿಂದ ವಿಶ್ವವಿದ್ಯಾನಿಲಯವೇ ಸದರಿ ಸಂಶೋಧನಾ ವಿದ್ಯಾರ್ಥಿಗಳಿಗೆ ಕಿರಿಯ ಸಂಶೋಧನಾ ಶಿಷ್ಯವೇತನವನ್ನು ತಲಾ ರೂ. 20,000/–ಗಳಂತೆ ನೀಡಲು ಉದ್ದೇಶಿಸಿರುವುದಾಗಿ ತಿಳಿಸಿದರು. ಇದರಿಂದ ವಿಶ್ವವಿದ್ಯಾನಿಲಯಕ್ಕೆ ಆರ್ಥಿಕ |

| | |
|---|---|
| | ಹೊರೆಯಾಗುವ ಸಾಧ್ಯತೆ ಇದ್ದರೂ ಸಹ ಸಂಶೋಧನೆಗೆ ಉತ್ತೇಜನ ನೀಡುತ್ತಿದ್ದು ನ್ಯಾಕ್‌ಗೆ ಸಹಕಾರಿಯಾಗುತ್ತದೆಯೆಂದು ತಿಳಿಸಿದರು.<br>ಶ್ರೀ ಮಹದೇಶುರವರು ಮಾತನಾಡಿ, ರೂಸಾ 2.0 ಫಂಡ್‌ಅನ್ನು ಉಪಯೋಗಿಸಿಕೊಂಡು ವಿಜ್ಞಾನ ಭವನದಲ್ಲಿ ಕೆಲವೊಂದು ಉಪಕರಣಗಳನ್ನು ದುರಸ್ತಿಪಡಿಸಲು ತಿಳಿಸಿದರು.<br>ಮಾನ್ಯ ಕುಲಪತಿಗಳು ಮಾತನಾಡಿ, ಉಪಕರಣಗಳು ದುರಸ್ತಿ ಮಾಡಿಸುವುದಾಗಿ ತಿಳಿಸಿದರು. |
| ತೀರ್ಮಾನ | **ರೂಸಾ 2.0 ಕಾರ್ಯಕ್ರಮದಡಿಯಲ್ಲಿ ಖರೀದಿಸಲಾಗುವ ವೈಜ್ಞಾನಿಕ ಉಪಕರಣಗಳ ನಿರ್ವಹಣೆಯ ಸಂಬಂಧ 15 ಅಭ್ಯರ್ಥಿಗಳನ್ನು ತಲಾ ರೂ.20,000/-ಗಳ ಶಿಷ್ಯವೇತನದಡಿಯಲ್ಲಿ ನೇಮಕ ಮಾಡಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |

**ಇತರೆ ವಿಷಯಗಳು:**

1. ಮಾನ್ಯ ಕುಲಪತಿಗಳು ಮಾತನಾಡಿ, ಕುಲಸಚಿವ (ಪರೀಕ್ಷಾಂಗ)ರವರು ಇವರು ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನ, ಓಆರ್‌ಐ ಕಟ್ಟಡ ಮತ್ತು ಹಳೆಯ ಜಿಲ್ಲಾಧಿಕಾರಿಗಳ ಕಟ್ಟಡವನ್ನು ವಿಶ್ವವಿದ್ಯಾನಿಲಯದ ಸುರ್ಪಧಿಗೆ ತೆಗೆದುಕೊಂಡು, ದಾನಿಗಳನ್ನು ಹುಡುಕಿ ಮೂರು ಕಟ್ಟಡವನ್ನು ನಿರ್ವಹಣೆ ಮಾಡುವುದರ ಕುರಿತು ಮಾಹಿತಿ ನೀಡಿರುತ್ತಾರೆ ಎಂದು ತಿಳಿಸಿದರು.

2. ಮಾನ್ಯ ಕುಲಪತಿಗಳು ಮಾತನಾಡಿ, ಜಯಲಕ್ಷ್ಮಿ ವಿಲಾಸ ಅರಮನೆ ನವೀಕರಣ ಕಾರ್ಯ ನವೆಂಬರ್ ತಿಂಗಳಿನಲ್ಲಿ ಮುಗಿಯುವ ಹಂತದಲ್ಲಿದೆ ಎಂದು ತಿಳಿಸುತ್ತಾ, ಜಯಲಕ್ಷ್ಮಿ ವಿಲಾಸ ಅರಮನೆಗೆ ಸಂಬಂಧಿಸಿದಂತೆ ಕೆಲವು ದಾನಿಗಳು ಬಂದಿದ್ದು, ಅವರು ನೀಡುವ ಹಣವನ್ನು ಬ್ಯಾಂಕ್‌ನಲ್ಲಿಟ್ಟು, ದೊರಕುವ ಬಡ್ಡಿ ಹಣದಿಂದ ಜಯಲಕ್ಷ್ಮಿ ವಿಲಾಸ ಅರಮನೆ ನಿರ್ವಹಣೆ ಮಾಡಲು ಬಳಸಿಕೊಳ್ಳಲಾಗುವುದು ಎಂದು ತಿಳಿಸುತ್ತಾ, ನಿರ್ವಹಣೆಗೆ ಒಂದು ಸಮಿತಿ ರಚಿಸಿ, ಸದರಿ ಸಮಿತಿಯಲ್ಲಿ ಮಾನ್ಯ ಕುಲಪತಿಗಳು, ಕುಲಸಚಿವರು, ದಾನಿಗಳು, ಹಣಕಾಸು ಅಧಿಕಾರಿಗಳು ಹಾಗೂ ನಿರ್ವಹಣಾಧಿಕಾರಿಯಿರುತ್ತಾರೆ. ಜಯಲಕ್ಷ್ಮಿ ವಿಲಾಸ ಅರಮನೆ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿದ್ದು, ದಾನಿಗಳೊಂದಿಗೆ 30 ರಿಂದ 40 ವರ್ಷಗಳ ಅವಧಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳಲಾಗುವುದೆಂದು ತಿಳಿಸಿದರು. ಇದೇ ರೀತಿ ಓಆರ್‌ಐ ಕಟ್ಟಡವನ್ನು ಸಹ ನಿರ್ವಹಣೆ ಮಾಡುವ ಕನಸು ನನ್ನದಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು.

   ಡಾ. ಟಿ.ಆರ್. ಚಂದ್ರಶೇಖರ್‌ರವರು ಮಾತನಾಡಿ, ಜಯಲಕ್ಷ್ಮಿ ವಿಲಾಸ ಅರಮನೆಗೆ ಸಂಬಂಧಿಸಿದಂತೆ ಒಡಂಬಡಿಕೆ ಮಾಡಿಕೊಳ್ಳುವ ಮೊದಲು ನಿಯಮಾನುಸಾರ ಸವಿಸ್ತಾರವಾದ ವಿಷಯವನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಬೇಕೆಂದು ತಿಳಿಸುತ್ತಾ, ಒಡಂಬಡಿಕೆಯ ಬಗೆಗೆ ಸದಸ್ಯರ ಅವಗಾಹನೆಗೆ ಸಲ್ಲಿಸುವುದು ಸೂಕ್ತವೆಂದು ತಿಳಿಸಿದರು. ವಿಶ್ವವಿದ್ಯಾನಿಲಯದ ಅಭಿವೃದ್ಧಿಗೆ ನಾವು ಪರವಾಗಿ ನಿಲ್ಲುತ್ತೇವೆ. ದಯವಿಟ್ಟು ಸಿಂಡಿಕೇಟ್ ಸಭೆಯ ಅನುಸಮರ್ಥನೆಗೆ ಮಂಡಿಸಬಾರದೆಂದು ತಿಳಿಸಿದರು.

   ಮಾನ್ಯ ಕುಲಪತಿಗಳು ಮಾತನಾಡಿ, ಕಾನೂನು ಸಲಹೆಗಾರರ ಅಭಿಪ್ರಾಯದಂತೆ ಒಡಂಬಡಿಕೆಯಲ್ಲಿ ಸೂಕ್ತ ಅಂಶಗಳನ್ನು ನಮೂದಿಸಲಾಗುವುದೆಂದು ತಿಳಿಸಿದರು.

   ಶ್ರೀ ಕೆ. ಗೋಕುಲ್ ಗೋವರ್ಧನ್‌ರವರು ಮಾತನಾಡಿ, ಒಡಂಬಡಿಕೆ ಮಾಡಿಕೊಳ್ಳುವ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯಕ್ಕೆ ಸಂಪೂರ್ಣ ಅಧಿಕಾರವಿರುತ್ತದೆ ಎಂಬುದನ್ನು ಒಡಂಬಡಿಕೆಯಲ್ಲಿ ಸ್ಪಷ್ಟವಾಗಿ ನಮೂದಿಸಬೇಕೆಂದು ತಿಳಿಸಿದರು.

ಶ್ರೀ ಮಹದೇಶುರವರು ಮತ್ತು ಶ್ರೀ ಕೆ. ಗೋಕುಲ್ ಗೋವರ್ಧನ್ ರವರುಗಳು ಮಾತನಾಡಿ, ಜಯಲಕ್ಷ್ಮಿ ವಿಲಾಸ ಅರಮನೆ ಪ್ರವೇಶ ದರದಲ್ಲಿ ಶೇಕಡವಾರು ಇಂತಿಷ್ಟು ಮೊತ್ತವನ್ನು ವಿಶ್ವವಿದ್ಯಾನಿಲಯಕ್ಕೆ ನೀಡುವ ಬಗ್ಗೆ ಒಡಂಬಡಿಕೆಯಲ್ಲಿ ನಮೂದಿಸುವುದು ಸೂಕ್ತ ಎಂದು ತಿಳಿಸಿದರು.

3. ಮಾನ್ಯ ಕುಲಪತಿಗಳು ಮಾತನಾಡಿ, 2026-27ನೇ ಸಾಲಿನ ಆಯವ್ಯಯ ವಿಷಯವನ್ನು ದಿನಾಂಕ: 27-03-2026ರಂದು ನಡೆಯುವ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗುವುದೆಂದು ಎಂದು ಸಭೆಯ ಗಮನಕ್ಕೆ ತಂದರು.

4. ಡಾ. ಕೆಂಪೇಗೌಡ ಬಿ.ಕೆ. ರವರು ಮಾತನಾಡಿ, ಎರಡು ದಿನಗಳ ಹಿಂದೆ ವಿಜ್ಞಾನ ಭವನದಲ್ಲಿ ಪ್ರಾಂಶುಪಾಲರ ಸಭೆಯನ್ನು ನಡೆಸಲಾಗಿರುತ್ತದೆಯೆಂದು ತಿಳಿಸುತ್ತಾ, ಸದರಿ ಸಭೆಯಲ್ಲಿ ಅಧ್ಯಯನ ಮಂಡಳಿ ಸದಸ್ಯರುಗಳ ನೇಮಕಾತಿಯ ಕುರಿತು ಚರ್ಚಿಸಲಾಗಿರುತ್ತದೆ. ಸ್ನಾತಕೋತ್ತರ ವಿಭಾಗಕ್ಕೆ ಅಧ್ಯಯನ ಮಂಡಳಿ ಅಧ್ಯಕ್ಷರನ್ನಾಗಿ ಹಾಗೂ ಮಾನಸಗಂಗೋತ್ರಿಯ ಪ್ರಾಧ್ಯಾಪಕರುಗಳನ್ನು ಸ್ನಾತಕ ವಿಭಾಗದ ಅಧ್ಯಾಪಕರನ್ನು ಸದಸ್ಯರನ್ನಾಗಿ ನೇಮಿಸಲಾಗುತ್ತದೆ ಎಂದು ತಿಳಿಸಿದರು.

ಪ್ರೊ. ಶಬ್ಬೀರ್ ಮೊಹಮದ್ ಮುಸ್ತಫರವರು ಮಾತನಾಡಿ, ಕೆಲವೊಂದು ವಿಭಾಗದ ಅಧ್ಯಯನ ವಿಭಾಗಗಳಲ್ಲಿ ಖಾಯಂ ಪ್ರಾಧ್ಯಾಪಕರು ಇರುವುದಿಲ್ಲ, ಇಂತಹ ಸಂದರ್ಭದಲ್ಲಿ ಇತರೆ ವಿಭಾಗದ ಅಧ್ಯಾಪಕರುಗಳನ್ನು ಸದಸ್ಯರುಗಳನ್ನಾಗಿ ನೇಮಕ ಮಾಡಲಾಗುತ್ತದೆ ಎಂದು ತಿಳಿಸುತ್ತಾ, ವಿಶ್ವವಿದ್ಯಾನಿಲಯದಲ್ಲಿ ಖಾಯಂ ಅಧ್ಯಾಪಕರುಗಳ ಸಂಖ್ಯೆ ಕ್ಷೀಣಿಸುತ್ತಿದೆ, ಅಧ್ಯಯನ ವಿಭಾಗದಲ್ಲಿ ಖಾಯಂ ಅಧ್ಯಾಪಕರು ಇಲ್ಲದಿದ್ದ ಸಂದರ್ಭದಲ್ಲಿ ಹಿರಿಯ ಅತಿಥಿ ಉಪನ್ಯಾಸಕರನ್ನು ಅಧ್ಯಯನ ಮಂಡಳಿಯ ಸದಸ್ಯರನ್ನಾಗಿ ನೇಮಕ ಮಾಡಿಕೊಳ್ಳುವಂತೆ ಅಭಿಪ್ರಾಯ ವ್ಯಕ್ತಪಡಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಖಾಯಂ ಅಧ್ಯಾಪಕರುಗಳ ಕೊರತೆ ಇರುವುದರಿಂದ ಮುಂದಿನ ದಿನಗಳಲ್ಲಿ ಈ ಕುರಿತು ಕ್ರಮವಹಿಸುವುದಾಗಿ ತಿಳಿಸುತ್ತಾ, ಸ್ನಾತಕ ವಿಭಾಗಕ್ಕೆ ಪರೀಕ್ಷಾ ಮಂಡಳಿ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ನೇಮಿಸುವಾಗ ಜೇಷ್ಠತೆಯ ಆಧಾರದ ಮೇಲೆ ನೇಮಿಸಲಾಗುತ್ತಿದೆಯೆಂದು ತಿಳಿಸಿದರು.

ಡಾ. ಕೆಂಪೇಗೌಡ ಬಿ.ಕೆ. ರವರು ಮಾತನಾಡಿ, ವಿದ್ಯಾರ್ಥಿಗಳಿಂದ ಅಂಕಪಟ್ಟಿ ಮತ್ತು ಘಟಿಕೋತ್ಸವ ಪ್ರಮಾಣ ಪತ್ರಕ್ಕೆ ಶುಲ್ಕ ಪಾವತಿಸಿಕೊಂಡರೂ ಸಹ ಮೂಲ ಪ್ರಮಾಣ ಪತ್ರ ನೀಡಿರುವುದಿಲ್ಲ. ಯುಯುಸಿಎಂಎಸ್‌ನಲ್ಲಿ ಬರತಕ್ಕ ವಿದ್ಯಾರ್ಥಿಗಳ ಫಲಿತಾಂಶ ಮತ್ತು ಅಂಕಪಟ್ಟಿಗಳು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವುದರಿಂದ ಆದಷ್ಟು ಬೇಗ ನೀಡುವಂತ ಕೆಲಸವಾಗಬೇಕು ಎಂದು ತಿಳಿಸಿದರು.

ಕುಲಸಚಿವರು (ಪರೀಕ್ಷಾಂಗ)ರವರು ಮಾತನಾಡಿ, ಕರ್ನಾಟಕ ಸರ್ಕಾರದ ಆದೇಶದ ಪ್ರಕಾರ ವಿಶ್ವವಿದ್ಯಾನಿಲಯ ಯಾವುದೇ ಅಂಕಪಟ್ಟಿಯನ್ನು ಮುದ್ರಿಸಬಾರದು ಎಂದು ತಿಳಿಸಿದೆ. ಡಿಜೀಲಾಕರ್‌ನಲ್ಲಿ ತೆಗೆದುಕೊಳ್ಳುವ ಅಂಕಪಟ್ಟಿಗೆ ಉದ್ಯೋಗದಲ್ಲಿ ಮಾನ್ಯತೆ ನೀಡುತ್ತಿಲ್ಲ ಎಂದು ವಿದೇಶಿ ವಿದ್ಯಾರ್ಥಿಗಳು ತಿಳಿಸಿದ್ದು, ಆದ್ಯತೆ ಮೇರೆಗೆ ವಿದೇಶಿ ವಿದ್ಯಾರ್ಥಿಗಳಿಂದ ರೂ. 5000/- ಗಳನ್ನು ಅಂಕಟ್ಟಿಗೆ ಮತ್ತು ರೂ. 5000/- ಗಳನ್ನು ಘಟಿಕೋತ್ಸವ ಪ್ರಮಾಣಪತ್ರಕ್ಕಾಗಿ ಪಾವತಿಸಿಕೊಂಡು ನೀಡಲಾಗುತ್ತಿದೆ ಎಂದು ತಿಳಿಸಿದರು.

ಡಾ. ಪ್ರಿಯ ಮ್ಯಾಥ್ಯೂ ರವರು ಮಾತನಾಡಿ, ಬಿ.ಎಡ್. ಕೋರ್ಸ್ ತೆಗೆದುಕೊಂಡಿರುವವರಿಗೂ ಸಹ ಅಂಕಪಟ್ಟಿ ಮತ್ತು ಘಟಿಕೋತ್ಸವ ಪ್ರಮಾಣಪತ್ರಕ್ಕಾಗಿ ತಲಾ ರೂ. 5000/-ರಂತೆ ಒಟ್ಟು ರೂ. 10,000/- ನೀಡಬೇಕಾಗಿರುವುದರಿಂದ, ವಿದ್ಯಾರ್ಥಿಗಳಿಗೆ ಹೊರೆಯಾಗುತ್ತದೆಯೆಂದು ತಿಳಿಸಿದರು.

ಡಾ. ನಟರಾಜು ಹೆಚ್.ಎಸ್. ರವರು ಮಾತನಾಡಿ, ಅಂಕಪಟ್ಟಿ ಮತ್ತು ಘಟಿಕೋತ್ಸವ ಪ್ರಮಾಣಪತ್ರಕ್ಕಾಗಿ ನಿಗದಿಪಡಿಸಿರುವ ಮೊತ್ತವನ್ನು ಕಡಿಮೆ ಮಾಡಬೇಕೆಂದು ತಿಳಿಸಿದರು.

ಡಾ. ಕೆಂಪೇಗೌಡ ಬಿ.ಕೆ. ರವರು ಮಾತನಾಡಿ, ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಯಂ ಅಧ್ಯಾಪಕರುಗಳಲ್ಲಿ ಮಾರ್ಗದರ್ಶನ ನೀಡಲು ಎಲ್ಲಾ ಅರ್ಹತೆಯನ್ನು ಹೊಂದಿರುವ ಅಧ್ಯಾಪಕರುಗಳನ್ನು ಗುರುತಿಸಿ, ಮಾರ್ಗದರ್ಶಕರ ಮಾನ್ಯತೆಯನ್ನು ನೀಡಿರುವುದು ಹರ್ಷದಾಯಕ. ಈ ಹಿನ್ನೆಲೆಯಲ್ಲಿ ಸದರಿ ಅಧ್ಯಾಪಕರುಗಳಿಗೆ ಹೆಚ್ಚಿನ ವಿದ್ಯಾರ್ಥಿಗಳನ್ನು ಮಾರ್ಗದರ್ಶನಕ್ಕಾಗಿ ನೋಂದಣಿ ಮಾಡಿಕೊಳ್ಳಲು ಅವಕಾಶ ಮಾಡಿಕೊಡುವಂತೆ ಕೋರಿದರು. ಹಾಗೂ ವಿಶ್ವವಿದ್ಯಾನಿಲಯದ ಸಂಯೋಜನೆಗೊಳಪಟ್ಟ ಕಾಲೇಜುಗಳ ಅಧ್ಯಾಪಕರುಗಳ ಶ್ರೇಣೀಕೃತ ಜ್ಯೇಷ್ಠತಾ ಪಟ್ಟಿ (ಗ್ರೇಡೇಶನ್ ಲಿಸ್ಟ್)ಯನ್ನು ನೀಡುವಂತೆ ಕೋರಿದ್ದು, ವಿಶ್ವವಿದ್ಯಾನಿಲಯದಿಂದ ಇದುವರೆಗೂ ನೀಡಿರುವುದಿಲ್ಲವೆಂದು ಸಹ ಸಭೆಯ ಗಮನಕ್ಕೆ ತಂದರು.

ಡಾ. ನಟರಾಜ್ ಹೆಚ್.ಎಸ್. ರವರು ಮಾತನಾಡಿ, ಪ್ರಸ್ತುತ ಇರುವ ಮಾರ್ಗದರ್ಶಕರಿಗೆ ಹೆಚ್ಚುವರಿಯಾಗಿ ಇಬ್ಬರು ವಿದ್ಯಾರ್ಥಿಗಳನ್ನು ನೋಂದಾಯಿಸಿಕೊಳ್ಳಲು ಅವಕಾಶ ಕಲ್ಪಿಸಿದ್ದಲ್ಲಿ ಸಂಶೋಧನಾ ವಿದ್ಯಾರ್ಥಿಗಳಿಗೆ ಸಂಶೋಧನೆ ಕೈಗೊಳ್ಳಲು ಅನುವು ಮಾಡಿಕೊಟ್ಟಂತಾಗುವುದು ಎಂದು ತಿಳಿಸಿದರು.

ಕುಲಸಚಿವರು (ಪರೀಕ್ಷಾಂಗ)ರವರು ಮಾತನಾಡಿ, ಈ ಸಂಬಂಧ ವಿಶ್ವವಿದ್ಯಾನಿಲಯದ ಸಂಯೋಜನೆಗೊಳಪಟ್ಟ ಕಾಲೇಜಿನ ಪ್ರಾಂಶುಪಾಲರುಗಳು ಮನವಿ ಸಲ್ಲಿಸಿದ್ದಲ್ಲಿ ನಂತರ ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಡಾ. ಕೆಂಪೇಗೌಡ ಬಿ.ಕೆ. ರವರು ಮಾತನಾಡಿ, ಪ್ರತಿ ವಿದ್ಯಾರ್ಥಿಯಿಂದ ಶೈಕ್ಷಣಿಕ ಸಾಲಿಗೆ ಕ್ರೀಡಾ ಶುಲ್ಕವನ್ನು ವಸೂಲು ಮಾಡಿ, ಸದರಿ ಮೊತ್ತವನ್ನು ವಿಶ್ವವಿದ್ಯಾನಿಲಯಕ್ಕೆ ಪಾವತಿಸುತ್ತಿದ್ದು, ಸದರಿ ಮೊತ್ತದಲ್ಲಿ ಶೇ. 50 ರಷ್ಟು ಕ್ರೀಡಾ ಶುಲ್ಕವನ್ನು ಕಾಲೇಜಿಗೆ ನೀಡಬೇಕೆಂದು ಕೋರಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಹಲವಾರು ಪದವಿ ಕಾಲೇಜುಗಳಿಂದ ಈವರೆವಿಗೂ ಸಹ ವಿಶ್ವವಿದ್ಯಾನಿಲಯಕ್ಕೆ ಸಂದಾಯವಾಗಬೇಕಾದ ಶುಲ್ಕವು ಬಾಕಿಯಿದ್ದು, ನಿಗದಿತ ವೇಳೆಯಲ್ಲಿಯೇ ಶುಲ್ಕವನ್ನು ವಿಶ್ವವಿದ್ಯಾನಿಲಯಕ್ಕೆ ಕಾಲೇಜುಗಳಿಂದ ಸಂದಾಯವಾಗಿರುವುದಿಲ್ಲ ಎಂದು ತಿಳಿಸುತ್ತಾ, ಅಂತರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಿಸಲಾಗುವುದೆಂದು ತಿಳಿಸಿದರು.

5. ಶ್ರೀ ನಾಗರಾಜು ಸಿ. ರವರು ಮಾತನಾಡಿ, ಮೊದಲನೇ ಸೆಮಿಸ್ಟರ್ ಮತ್ತು ಎರಡನೇ ಸೆಮಿಸ್ಟರ್ ಫಲಿತಾಂಶದ ಅಂಕಪಟ್ಟಿ/ಮಾಹಿತಿಗಳು ಇದುವರೆಗೂ ಸಹ ಡಿಜಿಲಾಕರ್‌ನಲ್ಲಿ ಅಪ್‌ಲೋಡ್ ಆಗಿರುವುದಿಲ್ಲವೆಂದು ವಿದ್ಯಾರ್ಥಿಗಳು ನಮ್ಮಗಳ ಗಮನಕ್ಕೆ ತಂದಿರುತ್ತಾರೆ. ಆದುದರಿಂದ ವಿದ್ಯಾರ್ಥಿಗಳು ಸಕಾಲದಲ್ಲಿ ಅಂಕಪಟ್ಟಿಗಳನ್ನು ಪರಿಶೀಲಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ತ್ವರಿತಗತಿಯಲ್ಲಿ ಡಿಜಿಲಾಕರ್‌ನಲ್ಲಿ ವಿದ್ಯಾರ್ಥಿಗಳು ತಮ್ಮ ತಮ್ಮ ಮಾಹಿತಿಗಳನ್ನು ಪರಿಶೀಲಿಸುವಂತಹ ಕೆಲಸವಾಗಬೇಕೆಂದು ತಿಳಿಸಿದರು.

ಕುಲಸಚಿವ (ಪರೀಕ್ಷಾಂಗ)ರವರು ಮಾತನಾಡಿ, ಸರ್ವರ್‌ನ ಸಮಸ್ಯೆಯಿಂದ ಸಕಾಲದಲ್ಲಿ ವಿದ್ಯಾರ್ಥಿಗಳ ಅಂಕಪಟ್ಟಿಗಳು/ಮಾಹಿತಿಗಳನ್ನು ಡಿಜಿಲಾಕರ್‌ನಲ್ಲಿ ಅಪ್‌ಲೋಡ್ ಮಾಡಲಾಗಿರುವುದಿಲ್ಲವೆಂದು ತಿಳಿಸುತ್ತಾ, ಸದರಿ ವಿಷಯದ ಬಗ್ಗೆ ಆದಷ್ಟು ಶೀಘ್ರವಾಗಿ ಕ್ರಮಕೈಗೊಳ್ಳಲಾಗುವುದೆಂದು ತಿಳಿಸಿದರು.

6. ಡಾ. ಹೆಚ್.ಎಂ. ಮಹೇಶರವರು ಮಾತನಾಡಿ, ಬಿ.ಎಡ್. ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳು ಮುಂದಿನ ಶೈಕ್ಷಣಿಕ ಸಾಲಿನಲ್ಲಿ ಪರೀಕ್ಷೆ ಬರೆಯಬೇಕಾಗಿರುವುದರಿಂದ ಅವರಿಗೆ ಒಂದು ವರ್ಷ ನಷ್ಟವಾಗುತ್ತಿದೆ ಹಾಗೂ ಅವರಿಗೆ ಉದ್ಯೋಗ ಪಡೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಪೂರಕ ಪರೀಕ್ಷೆಗೆ ಅವಕಾಶ ನೀಡಬೇಕೆಂದು ಕೋರಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಪೂರಕ ಪರೀಕ್ಷೆಗೆ ಅವಕಾಶ ಕಲ್ಪಿಸಲಾಗುವುದು ಎಂದು ತಿಳಿಸಿದರು.

7. ಶ್ರೀ ಶಂಕರ್ ಎಂ. ರವರು ಮಾತನಾಡಿ, ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ನೀಡುತ್ತಿರುವ ಶಿಷ್ಯವೇತನವನ್ನು ಪರಿಷ್ಕರಿಸುವಂತೆ ಹಾಗೂ ಸಂಶೋಧನಾ ಅವಧಿಯನ್ನು 3 ವರ್ಷದ ಬದಲಾಗಿ 5 ವರ್ಷಕ್ಕೆ ವಿಸ್ತರಿಸಬೇಕೆಂದು ಕೋರಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಈಗಾಗಲೇ ಹಿಂದುಳಿದ ವರ್ಗದ ವಿದ್ಯಾರ್ಥಿಗಳ ಶಿಷ್ಯವೇತನವನ್ನು ಪರಿಷ್ಕರಿಸಲಾಗಿದೆಯೆಂದು ತಿಳಿಸುತ್ತಾ, ಖಾಯಂ ಪ್ರಾಧ್ಯಾಪಕರುಗಳ ಕೊರತೆ ಇರುವುದರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಮೂರು ವರ್ಷಕ್ಕೆ ಸೀಮಿತಗೊಳಿಸಲಾಗಿದೆ ಎಂದು ತಿಳಿಸಿದರು.

ಕುಲಸಚಿವರು (ಪರೀಕ್ಷಾಂಗ)ರವರು ಮಾತನಾಡಿ, ಮೂರು ವರ್ಷಗಳಿಗೆ ಸಂಶೋಧನೆಯನ್ನು ಸೀಮಿತ ಗೊಳಿಸಿದ್ದು, ಇತರೆ ವಿದ್ಯಾರ್ಥಿಗಳಿಗೆ ಸಂಶೋಧನೆ ನಡೆಸಲು ಅವಕಾಶ ದೊರಕುತ್ತದೆಯೆಂದು ತಿಳಿಸಿದರು.

8. ಶ್ರೀ ನಾಗರಾಜು ಸಿ. ರವರು ಮಾತನಾಡಿ, ಮಹಾರಾಜ ಕಾಲೇಜಿನಲ್ಲಿ ಮೊದಲನೇ ವರ್ಷದ ಬಿ.ಕಾಂನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಯು ತಲೆ ಸುತ್ತಿನಿಂದ ಬಿದ್ದಿದ್ದು, ಆತನನ್ನು ಆಸ್ಪತ್ರೆ ಸೇರಿಸಲಾಗಿ ಎರಡು ದಿನದ ನಂತರ ಅವನು ಸಾವನ್ನಪ್ಪಿರುತ್ತಾನೆ. ಆತನಿಗೆ ತಾಯಿ ಮಾತ್ರ ಇದ್ದು, ಆಸ್ಪತ್ರೆಗೆ ಸುಮಾರು ರೂ. 29.00 ಲಕ್ಷ ರೂಪಾಯಿಗಳು ಖರ್ಚಾಗಿರುತ್ತದೆ. ಆದ್ದರಿಂದ ಕಾಲೇಜು ಅಥವಾ ವಿಶ್ವವಿದ್ಯಾನಿಲಯದ ವತಿಯಿಂದ ಆರ್ಥಿಕ ಸಹಾಯ ಮಾಡಬೇಕೆಂದು ತಿಳಿಸಿದರು.

ಕುಲಪತಿಗಳು ಮಾತನಾಡಿ, ವಿದ್ಯಾರ್ಥಿಗಳಿಂದ ಅಪಘಾತ/ ದುರ್ಘಟನೆಗೆ ಸಂಬಂಧಿಸಿದಂತೆ ಶುಲ್ಕವನ್ನು ತೆಗೆದುಕೊಳ್ಳಬಾರದು ಎಂದು ಸರ್ಕಾರ ತಿಳಿಸಿರುತ್ತದೆ ಮತ್ತು ಕಾನೂನು ಸಲಹೆಗಾರರು ಸಹ ಸದರಿ ಶುಲ್ಕವನ್ನು ತೆಗೆದುಕೊಳ್ಳಬಾರದು ಎಂದು ತಿಳಿಸಿರುತ್ತಾರೆ ಎಂದು ಸಭೆಯ ಗಮನಕ್ಕೆ ತಂದರು.

ಶ್ರೀ ಕೆ. ಗೋಕುಲ್ ಗೋವರ್ಧನ್ ರವರು ಮಾತನಾಡಿ, ವಿದ್ಯಾರ್ಥಿಗಳಿಗೆ ಅಪಘಾತ/ದುರ್ಘಟನೆ ಸಂಭವಿಸಿದ ಸಂದರ್ಭದಲ್ಲಿ ಅವರ ಕುಟುಂಬದವರಿಗೆ ಅಥವಾ ಔಷಧೋಪಚಾರಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸಿಂಡಿಕೇಟ್ ಸಭೆಯಲ್ಲಿ ನಿರ್ಣಯವನ್ನು ತೆಗೆದುಕೊಂಡು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿದ್ದಲ್ಲಿ ಸರ್ಕಾರ ಅನುಮೋದಿಸಬಹುದು ಎಂದು ತಿಳಿಸಿದರು.

ಶ್ರೀ ಮಹದೇಶುರವರು ಮಾತನಾಡಿ, ಸದರಿ ವಿಷಯವಾಗಿ ಕಳೆದ ಸಭೆಯಲ್ಲಿ ಚರ್ಚಿಸಿರುತ್ತೇನೆ. ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಆಕಸ್ಮಿಕವಾಗಿ ಸಂಭವಿಸುವ ದುರ್ಘಟನೆಗಳಿಗೆ ವಿದ್ಯಾರ್ಥಿಗಳಿಂದ ಸ್ವಲ್ಪ ಮಟ್ಟಿಗೆ ಹಣ ಸಂಗ್ರಹಿಸಲಾಗುತ್ತಿದೆ. ವಿದ್ಯಾರ್ಥಿಗಳಿಗೆ ದುರ್ಘಟನೆ ಸಂಭವಿಸಿದ್ದಲ್ಲಿ ವಿದ್ಯಾರ್ಥಿಗಳ ಪೋಷಕರಿಗೆ ಸಹಾಯವಾಗಿ ಹಣ ನೀಡಲಾಗುತ್ತಿದೆ. ಆದ್ದರಿಂದ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೂ ಒಳಿತಾಗುವ ನಿಟ್ಟಿನಲ್ಲಿ ಸೂಕ್ತ ಕ್ರಮತೆಗೆದುಕೊಳ್ಳಬೇಕೆಂದು ತಿಳಿಸಿದರು.

ಶ್ರೀ ಹೆಚ್.ಎಂ. ಮಹೇಶ್ ರವರು ಮಾತನಾಡಿ, ನಮ್ಮ ಕಾಲೇಜಿನ ವತಿಯಿಂದ ಪ್ರತಿ ವಿದ್ಯಾರ್ಥಿಗೂ ವಿಮಾ ಯೋಜನೆಯನ್ನು ಜಾರಿಗೊಳಿಸಿದ್ದು, ಪ್ರತಿ ವಿದ್ಯಾರ್ಥಿಯಿಂದ ವಾರ್ಷಿಕವಾರು ರೂ. 249/–ಗಳನ್ನು ಪಡೆದು ವಿಮಾ ಯೋಜನೆಗೆ ಒಳಪಡಿಸಲಾಗುತ್ತಿದೆ. ವಿದ್ಯಾರ್ಥಿಯು ಅಪಘಾತ/ದುರ್ಘಟನೆಯಿಂದ

ತೊಂದರೆಗೊಳಪಟ್ಟಲ್ಲಿ ವಿಮಾ ಕಂಪನಿ ವತಿಯಿಂದಲೇ ವಿದ್ಯಾರ್ಥಿಯ ಪೋಷಕರಿಗೆ ಹಣ ಸಂದಾಯವಾಗುತ್ತದೆ ಎಂದು ತಿಳಿಸುತ್ತಾ, ಈ ರೀತಿಯ ಕ್ರಮವನ್ನು ಎಲ್ಲಾ ಕಾಲೇಜಿನವರು ಅನುಸರಿಸಿದ್ದಲ್ಲಿ ವಿದ್ಯಾರ್ಥಿಗಳಿಗೆ ಹಾಗೂ ಪೋಷಕರಿಗೂ ಒಳಿತಾಗವುದೆಂದು ಸಲಹೆ ನೀಡಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಶ್ರೀ ನಾಗರಾಜು ಸಿ. ರವರ ಮನವಿಯನ್ನು ಪರಿಗಣಿಸಿ, ಸದರಿ ವಿಷಯವಾಗಿ ಮನವಿಯನ್ನು ಸಲ್ಲಿಸುವಂತೆ ತಿಳಿಸಿದರು.

9. ಕುಲಸಚಿವರು (ಪರೀಕ್ಷಾಂಗ)ರವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಹಲವಾರು ವರ್ಷಗಳಿಂದ ತಾತ್ಕಾಲಿಕ ತಾಂತ್ರಿಕ ಸಿಬ್ಬಂದಿ/ಬೋಧಕೇತರರ ಖಾಯಂ ನೇಮಕಾತಿಯಾಗಿರುವುದಿಲ್ಲ. ವಿಶ್ವವಿದ್ಯಾನಿಲಯದಿಂದ ಅಧಿನಿಯಮದನ್ವಯ ತಾಂತ್ರಿಕ ಮತ್ತು ಬೋಧಕೇತರರ ಉದ್ಯೋಗಿಗಳನ್ನು ರೋಸ್ಟರ್ ಬಿಂದುಗಳ ಮೂಲಕ ಸಿಂಡಿಕೇಟ್ ಅನುಮೋದನೆ ಪಡೆದುಕೊಂಡು ಸರ್ಕಾರಕ್ಕೆ ಸಲ್ಲಿಸಿ ಸರ್ಕಾರದ ಅನುಮೋದನೆ ಮೇರೆಗೆ ತಾಂತ್ರಿಕ ಮತ್ತು ಬೋಧಕೇತರರ ಉದ್ಯೋಗಿಗಳನ್ನು ಖಾಯಂ ನೇಮಕಾತಿ ಕೈಗೊಳ್ಳಬಹುದು ಎಂದು ತಿಳಿಸುತ್ತಾ, ಇದರಿಂದ ಎಷ್ಟೋ ವಿಭಾಗದಲ್ಲಿನ ತಾಂತ್ರಿಕ ಸಿಬ್ಬಂದಿ/ಬೋಧಕೇತರರ ಸಿಬ್ಬಂದಿಗಳ ಅವಶ್ಯಕತೆ ಪೂರ್ಣಗೊಳಿಸಬಹುದು ಎಂದು ತಿಳಿಸಿದರು.

10. ಮಾನ್ಯ ಕುಲಪತಿಗಳು ಮಾತನಾಡಿ, ಪ್ರೊ ಆರ್.ಎಸ್. ಉಮಾಕಾಂತ್‌ರವರ ಪ್ರಕರಣಕ್ಕೆ ಸಂಬಂಧಿಸಿದಂತೆ ಆಂತರಿಕ ದೂರು ಸಮಿತಿಯು ಸಲ್ಲಿಸಿರುವ ಅಂತಿಮ ವರದಿಯನ್ನು ಕುಲಸಚಿವರು ಸಭೆಯಲ್ಲಿ ಮಂಡಿಸಬೇಕೆಂದು ತಿಳಿಸಿದರು.

ಕುಲಸಚಿವರು ಮುಚ್ಚಿದ ಲಕೋಟೆಯಲ್ಲಿ ಪ್ರೊ. ಆರ್.ಎಸ್. ಉಮಾಕಾಂತ್, ಪ್ರಾಧ್ಯಾಪಕರು, ರೇಷ್ಮೆಕೃಷಿ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರಿಗೆ ಸಂಬಂಧಿಸಿದ ಆಂತರಿಕ ದೂರು ಸಮಿತಿ ಸಲ್ಲಿಸಿರುವ ಅಂತಿಮ ವರದಿಯನ್ನು ತೆರೆದು ಸಾರಾಂಶವನ್ನು ಸಭೆಯ ಗಮನಕ್ಕೆ ತಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಆಂತರಿಕ ದೂರು ಸಮಿತಿಯು ಸಲ್ಲಿಸಿರುವ ಅಂತಿಮ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಬೇಕಾಗಿರುವುದರಿಂದ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮರು ಮಂಡಿಸುವುದಾಗಿ ತಿಳಿಸಿದರು.

11. ಡಾ. ಶಿಲ್ಪ ಜೆ. ರವರು ಮಾತನಾಡಿ, ಸಿಪಿಡಿಪಿಎಸ್‌ಯಲ್ಲಿ ಕೆಲವು ಉಪಕರಣಗಳನ್ನು ಬಳಸದೇ ಇರುವುದು ಕಂಡು ಬಂದಿದ್ದು, ಸದರಿ ಉಪಕರಣಗಳನ್ನು ಇತರೆ ವಿಭಾಗ ಹಾಗೂ ಸಂಶೋಧನೆಗಳಿಗೆ ಬಳಸಿಕೊಳ್ಳ ಬಹುದೆಂದು ತಿಳಿಸಿದರು.

ಅಂತಿಮವಾಗಿ, ಸಭೆಯಲ್ಲಿ ಮುಕ್ತವಾಗಿ ಚರ್ಚಿಸಿ ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲು ಸಹಕಾರ ಹಾಗೂ ಸಲಹೆಗಳನ್ನು ನೀಡಿರುವ ಎಲ್ಲಾ ಸದಸ್ಯರುಗಳಿಗೆ ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

20/3/2026

**ಕುಲಸಚಿವರು ಮತ್ತು ಸದಸ್ಯ ಕಾರ್ಯದರ್ಶಿ** | **ಕುಲಪತಿಗಳು ಮತ್ತು ಅಧ್ಯಕ್ಷರು**